# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಜಲಂಧರನ ಕಾಳಗ

ಕವಿ

## ಕುತ್ಯಾರು ಗೋಪಾಲಕೃಷ್ಣ ಉಪಾಧ್ಯಾಯ


ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®



Email: yakshaprasangakosha@gmail.com

Blog: www.yakshaprasangakosha.com



ಆವೃತ್ತಿ ೧.೦

ನವೆಂಬರ್ ೩೦, ೨೦೧೯

ಯಕ್ಷವಾಹಿನಿ

Email: yakshaprasangakosha@gmail.com, yakshavahini@gmail.com Blog: www.yakshaprasangakosha.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನು ಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಪದ್ಮಪುರಾಣ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಪಾವಂಜೆ ಗುರುರಾವ್ & ಸನ್ಸ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೪೦೬

**ಪಾತ್ರಗಳು:**

ದೇವೇಂದ್ರ, ಶಚಿ, ಕುಂಭಕೇತ, ನಿಕುಂಭ, ಈಶ್ವರ, ವೀರಭದ್ರ, ಬೆಸ್ತ, ಕುಬೇರ ಅವನ ಪತ್ನಿ, ವಿಷ್ಣು, ಲಕ್ಷ್ಮಿ, ಬ್ರಹ್ಮ, ಜಲಂಧರ, ಕಾಲನೇಮಿ, ವೃಂದೆ, ಮಾಯಾ ಕುಂಭಕೇತ, ದೇವತೆಗಳು, ರಾಕ್ಷಸರು, ದ್ವಾರಪಾಲಕ

**ಕಥಾಸಾರಾಂಶ:**

ದೇವೇಂದ್ರ ಶಚಿಯೊಡನೆ ಈಶ್ವರನಲ್ಲಿಗೆ ಹೋಗುವುದು. ದಾರಿಯಲ್ಲಿ ಬಾಯಾರಿಕೆ. ಕುಂಭಕೇತ ನಿಕುಂಭ ರಕ್ಕಸರು ಮಧುವಿನಲ್ಲಿ ಅಣುರೂಪದಿಂದ ದೇವೇಂದ್ರನಲ್ಲಿ ಸೇರುವುದು. ಬರುವುದು ತಡವಾಯಿತೆಂದು ದೇವೇಂದ್ರ ಈಶ್ವರನ ಕುತ್ತಿಗೆಗೆ ವಜ್ರಪ್ರಹಾರ ಮಾಡುತ್ತಾನೆ. ವೀರಭದ್ರ ದೇವೇಂದ್ರ ಯುದ್ಧ. ಶಿವನು ಯುದ್ಧವನ್ನು ತಡೆದು ಮೂರನೇ ಕಣ್ಣು ತೆರೆಯಲು ದೇವೇಂದ್ರನ ಶರೀರದಲ್ಲಿದ್ದ ರಕ್ಕಸ ಓಡಿಹೋಗುವುದು. ದೇವೇಂದ್ರ ಶಿವನ ಕ್ಷಮೆ ಕೇಳುವುದು. ಮೂರನೇ ಕಣ್ಣಿನ ಜ್ವಾಲೆ ರಕ್ಕಸರನ್ನು ಸಂಹರಿಸಿ ಒಂದು ಮಗುವಾಗಿ ಸಮುದ್ರದಲ್ಲಿ ಇರಲು ಒಬ್ಬ ಬೆಸ್ತನಿಗೆ ಸಿಕ್ಕುವುದು. ಅದನ್ನು ಅವನು ಕುಬೇರನಿಗೆ ಕೊಡುವುದು. ಅವನ ಹೆಂಡತಿಯ ಮಾತಿನಂತೆ ಬ್ರಹ್ಮನಲ್ಲಿ ಮಗುವಿನ ಬಗ್ಗೆ ಕೇಳುವುದು. ಅವನಿಗೆ ಜಲಂಧರನೆಂದು ನಾಮಕರಣ. ಮಾಯಾ ಕುಂಭಕೇತನ ಮಾತು ಕೇಳಿ ವೃಂದೆಯೊಡನೆ ಮದುವೆ. ರಾಕ್ಷಸರೊಡನೆ ಹೋಗಿ ಸ್ವರ್ಗವನ್ನು ಗೆಲ್ಲುವ ಹೇಳಿಕೆ. ನಾರದರು ಬೇಡ ಎಂದು ಬುದ್ಧಿ ಹೇಳುತ್ತಾರೆ. ನಾರದರ ವೈಕುಂಠ ದರ್ಶನ. ಲಕ್ಷ್ಮಿಯಿಂದ ತಮ್ಮನಾದ ಜಲಂಧರನನ್ನು ಕಾಣಲು ಅಪೇಕ್ಷೆ. ಮಾರುವೇಷದಿಂದ ಇಬ್ಬರೂ ಬರುವುದು. ಅವನ ಭಕ್ತಿಗೆ ಮೆಚ್ಚಿ ಅವನ ಇಚ್ಛೆಯಂತೆ ಅಲ್ಲಿಯೇ ಇರುತ್ತಾರೆ. ಸ್ವರ್ಗಕ್ಕೆ ಧಾಳಿ. ಇಂದ್ರನ ಸೋಲು. ಈಶ್ವರನಲ್ಲಿಗೆ ಮೊರೆ. ಸಾಂತ್ವನ. ಜಲಂಧರ ಈಶ್ವರರ ಯುದ್ಧ. ಈಶ್ವರನಿಂದ ವಿಷ್ಣುವಿನ ಸ್ಮರಣೆ. ಸಹಾಯ ಯಾಚನೆ. ಜಲಂಧರನ ಪತ್ನಿಯ ಪಾತಿವ್ರತ್ಯ ಕೆಡದೇ ಅವನಿಗೆ ಮರಣವಿಲ್ಲ ಎಂದು ವಿಷ್ಣುವಿನ ಸೂಚನೆ. ಅದನ್ನು ಕೆಡಿಸಲು ಭೂಲೋಕಕ್ಕೆ ಬಂದು ವನ ನಿರ್ಮಿಸಿ ಯತಿಯಾಗಿ ಇರಲು, ಗಂಡನನ್ನು ಹುಡುಕುತ್ತ ಬಂದ ವೃಂದೆಯನ್ನು ಜಲಂಧರವೇಷ ಧರಿಸಿ ಕೆಡಿಸುತ್ತಾನೆ. ಅತ್ತ ಜಲಂಧರನು ಶಿವನು ಬಿಟ್ಟ ಅಸ್ತ್ರಕ್ಕೆ ಸತ್ತು ಅವನ ರುಂಡ ಬಂದು ವೃಂದೆಯ ಎದುರು ಬೀಳುತ್ತದೆ. ನಿಜ ತಿಳಿದು ಅಳುತ್ತಾಳೆ. ಶಿರಸಹಿತ ಅಗ್ನಿಪ್ರವೇಶ ಮಾಡುತ್ತಾಳೆ. ದೇವತೆಗಳು ಬಂದು ದೇವಲೋಕಕ್ಕೆ ಬರಲು ಬೇಡಿಕೊಂಡಾಗ ನಾರದನು ವೃಂದೆಯನ್ನು ತುಳಸಿಯ ರೂಪದಲ್ಲಿ ದೇವತೆಗಳಲ್ಲಿ ನೆಲಸಿ ವರ್ಷಕ್ಕೊಮ್ಮೆ ಬಂದು ಪೂಜಿಸುವ ಬಗ್ಗೆ ಹೇಳಿದಾಗ ಎಲ್ಲರೂ ಒಪ್ಪಿ ದೇವಲೋಕಕ್ಕೆ ಹೋಗುತ್ತಾರೆ

**ಕವಿ ಪರಿಚಯ : (ಆಧಾರ – ಕಜೆ ಸುಬ್ರಹ್ಮಣ್ಯ ಭಟ್ಟರು)**

ಕುತ್ಯಾರು ಗೋಪಾಲಕೃಷ್ಣ ಉಪಾಧ್ಯಾಯರು ಬೆಳ್ತಂಗಡಿ ತಾಲೂಕಿನ ಕುತ್ಯಾರು ಎಂಬ ಊರಿನವರು. ವೈದಿಕರೂ ಆಗಿದ್ದ ಇವರು ಜ್ಯೋತಿಷ್ಯ ವೃತ್ತಿ ನಿರತರಾಗಿದ್ದರು. ಇವರು ಯಕ್ಷಗಾನ ಭಾಗವತಿಕೆಯನ್ನು ಇವರ ಅಜ್ಜ ಬೆಳೇರಿ ವೆಂಕಟರಮಣ ರಾಯರಿಂದಲೂ, ಶಾಸ್ತ್ರೀಯ ಸಂಗೀತವನ್ನು ವಿದ್ವಾನ್ ಶಾಮರಾವ್ ರವರಿಂದಲೂ ಅಭ್ಯಾಸ ಮಾಡಿದ್ದು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಇವರು ಜಲಂಧರನ ಕಾಳಗ, ವಿಶ್ವರೂಪ ದರ್ಶನ ಹಾಗೂ ವಾಮನ ಚರಿತ್ರೆ ಎಂಬ ಪ್ರಸಂಗಗಳನ್ನು ರಚಿಸಿದ್ದು ಅದರಲ್ಲಿ ಜಲಂಧರನ ಕಾಳಗ ಪ್ರಸ್ತುತ ಮೇಳಗಳಲ್ಲಿ

ಚಾಲ್ತಿಯಲ್ಲಿದೆ. ಇದಲ್ಲದೆ ಫಲ ಜ್ಯೋತಿಷ್ಯ ಸಾರ, ಸಿದ್ಧಾಂತ ಶಿರೋಮಣಿ ಹಾಗೂ ಶ್ರೀ ದೇವಿ ಭಜನಾವಳಿ ಇವರ ಇತರ ಕೃತಿಗಳು. ೨೦೦೪ರಲ್ಲಿ ತಮ್ಮ ೮೭ ನೇ ವಯಸ್ಸಿನಲ್ಲಿ ದೈವಾಧೀನರಾದರು. ಇವರ ಏಕೈಕ ಪುತ್ರಿ ಈಗ ಕೋಲಾರ ಬಳಿ ನೆಲೆಸಿದ್ದು ಅಧ್ಯಾಪಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇವರು ಬರೆದ ಪ್ರಸಂಗಗಳು: ಜಲಂಧರನ ಕಾಳಗ, ವಿಶ್ವರೂಪ ದರ್ಶನ ಹಾಗೂ ವಾಮನ ಚರಿತ್ರೆ

**ಟಿಪ್ಪಣಿ** :

ತೆಂಕಿನಲ್ಲಿ ಬಳಕೆಯಲ್ಲಿರುವ ಪ್ರಸಂಗ

# ಪ್ರಸಂಗ ಸಾಹಿತ್ಯ

**ದ್ವಿಪದಿ**

ಶುಕಮುನೀಶ್ವರನ ದಿವ್ಯಾಂಘ್ರಿಗಳ ಸ್ಮರಿಸಿ |
ಸುಕವಿಗಳೊಳಧಿಕತರ ಸ್ನೇಹವಂ ಬಳಸಿ || 1 ||
ಶ್ರೀಮದುತ್ತಮ ಪದ್ಮಪೌರಾಣದೊಳಗೆ |
ಆ ಮಹಾ ಸೂತಮುನಿ ಶೌನಕಾದ್ಯರಿಗೆ || 2 ||
ತಾ ಪೇಳ್ದ ಕಥನದಲಿ ಖಳ ಜಲಂಧರನ |
ಆ ಪಿನಾಕಿಯು ಗೆಲ್ದು ದಯದಿ ಸುರವರನ || 3 ||
ಪಾಲಿಸಿದ ಕಥೆಯನಿದ ಯಕ್ಷಗಾನದಲಿ |
ಪೇಳುವೆನು ನರಹರಿಯ ವರಕಟಾಕ್ಷದಲಿ || 4 ||
ಚಿತ್ತದಲಿ ಬೇಸರದೆ ಪ್ರಾಜ್ಞರಾಲಿಪುದು |
ವ್ಯತ್ಯಾಸವಿದ್ದರಿದ ತಿದ್ದಿ ಮೆರೆಸುವುದು || 5 ||

**ಸೌರಾಷ್ಟ್ರ - ತ್ರಿವುಡೆ**

ಧರೆಯೊಳುತ್ತಮವೆನಿಪ ನೈಮಿಶ |
ವರ ಮಹಾರಣ್ಯದಲಿ ಮುನಿಗಳ |
ವರ ಸಮೂಹವವೆರಸಿ ಸೂತನು | ಹರುಷದಿಂದ || 6 ||
ವಾರಿರುಹಪೌರಾಣಕಥೆ ವಿ |
ಸ್ತಾರಗೊಳಿಸಲು ಕೇಳಿ ಋಷಿಪರಿ |
ವಾರ ಸೂತನ ಪದಕೆ ನಮಿಸುತ | ಚಾರುದಯದಿ || 7 ||
ಕೇಳಿಕೊಂಡರು ವರ ಜಲಂಧರ |
ಖೂಳ ಶರಧಿಯೊಳೆಂತು ಜನಿಸಿದ |
ಭಾಳನೇತ್ರನೊಳ್ ಹಳಚಿ ಮಡಿದ ವಿ | ಶಾಲ ಕಥೆಯ || 8 ||
ಒಂದುಳಿಯದೆಮಗರುಹಬೇಕೆನ |
ಲೆಂದ ವಚನವ ಕೇಳಿ ಸೂತನು |
ಸಿಂಧುಶಯನನ ಸ್ಮರಿಸಿ ಮುಂಗಥೆ | ಯೆಂದನಾಗ || 9 ||

**ಭೈರವಿ - ಝಂಪೆ**

ದೃಢಮನರು ಕೇಳಿರೈ | ಮೃಡನ ಭಜಿಸುತ ಪಿಂತೆ |
ಬಿಡುಗಣ್ಣರೊಡೆತನವ | ಪಡೆದು ಸುರನಾಥ || 10 ||
ಸುರರು ದಿಕ್ಪಾಲಕರು | ಪರಮ ವಿದ್ಯಾಧರರು |
ವರ ಮಹೋರಗರು ಕಿ | ನ್ನರರು ಖೇಚರರು || 11 ||
ನಿಗಮ ಶಾಸ್ತ್ರೋತ್ಕರರು | ಒಗುಮಿಗೆಯ ತಾರ್ಕಿಕರು |
ಬಗೆಬಗೆಯ ವಾಗ್ಮಿಗಳು | ಮುಗುದೆಯರು ಸಹಿತ || 12 ||
ರಂಭೆಯೂರ್ವಶಿಗಳೆಂ | ದೆಂಬಷ್ಟ ಸೌಭಾಗ್ಯ |
ಸಂಭ್ರಮದೊಳೋಲಗದಿ | ಜಂಭಾರಿಯೆಸೆದ || 13 ||
ಒಂದು ದಿನ ಮೃಡನ ಪದ | ವಂದಿಸುವೆನೆಂದಮರ |
ವೃಂದಸಹ ರಜತಾದ್ರಿ | ಗಂದು ಪೊರಮಡಲು || 14 ||
ನೋಡಿ ಶಚಿದೇವಿಯತಿ | ಗಾಢದಲಿ ವಲ್ಲಭನ |
ಕೂಡೆ ಹರುಷದೊಳು ಮಾ | ತಾಡಿದಳು ಮುದದಿ || 15 ||

**ತೋಡಿ - ಆದಿ**

ವಿಮಲ ಗುಣಾರ್ಣವ ಯೆನ್ನ | ರಮಣ ಲಾಲಿಸೀಗ ||
ಸಮರತಿ ನಾನಿರೆ ಮನವ್ಯಾವ | ರಮಣಿಮೇಲಾಯ್ತು || 16 ||
ಎಲೆ ಮೃಗಾಕ್ಷಿ ನಿನ್ನಿಂದಧಿಕ | ಚೆಲುವೆಯರಾರಿಹರೆ ||
ನಳಿನಗಂಧಿ ತ್ರಿಪುರಾರಿಯ | ಬಳಿಗಯ್ದುವೆ ನಾನು || 17 ||
ಎನಲೆಂದಳೇ ನಲ್ಲ ಪಂಚಾ | ನನನನೀಕ್ಷಿಪರೀಗ ||
ಇನಿಯ ದಿಟವೇ ಪೋಪುದಾದ | ರೆನುವೆ ಬಹೆ ನಿನ್ನೊಡನೆ || 18 ||

ವಲ್ಲಭೆ ನೀ ಬಂದು ಬರಿದೆ | ಯಲ್ಲಿ ಮಾಳ್ಪುದೇನೆ ||
ನಿಲ್ಲದುಸಿರೆನ್ನೊಳೆನಲು | ಸೊಲ್ಲಿಸಿದಳ್ ತಾನೆ || 19 ||
ಶಿವನ ನೀನರ್ಚಿಸುವನಕ | ಶಿವೆಯ ಪೂಜಿಪೆನೆಂದು ||
ಸುವಿಲಾಸದಿ ಕರೆದೊಯ್ಯೆನಲು | ದಿವಿಜನಾಥನೆಂದ || 20 ||

**ಕೇದಾರಗೌಳ - ಅಷ್ಟ**

ತರುಣಿರನ್ನಳೆ ಕೇಳು ಬರಿದೆ ನೀ ಬರುವುದು |
ತರವಲ್ಲ ಪಥದೊಳಗೆ ||
ದುರುಳರ ಬಾಧೆ ನೀನರಮನೆಯೊಳಗೀಗ |
ಲಿರುಯೆನಲಿಂತೆಂದಳು || 21 ||
ವಲ್ಲಭ ನೀನೆನ್ನ ಸಂಜತೆಯಿರುವಾಗ |
ಖುಲ್ಲರಿಂದೇನಪ್ಪುದೊ ||
ಬಲ್ಲೆನು ಮೊದಲೆ ನಿನ್ನಯ ಜಾಲವಿದ್ಯೆಗ |
ಳೆಲ್ಲವೆಂದೆನೆ ನುಡಿದ || 22 ||
ಜಾಣೆಯರರಸಿ ನೀ ಬಾರೆನ್ನ ಪಟ್ಟದ |
ರಾಣಿ ಕೇಳೆಲೆ ಮುದದಿ ||
ಕೌಣಪರುಪಟಳ ಸುಳ್ಳಲ್ಲ ದಿಟವುಯೆ |
ನ್ನಾಣೆಯೆಂದೆನಲೆಂದಳು || 23 ||
ಸ್ವರ್ಗಾಧಿಪತಿಯೆ ನೀ ಬಿಡು ಸಟೆ ದೈತ್ಯರು |
ದುರ್ಘಟರೇ ನಿನಗೆ ||
ಭರ್ಗನ ದಯವಿರಲೇನಹುದೆನಲಾ ಸಾ |
ಸಿರ್ಗಣ್ಣನಿನಿಯಳನು || 24 ||
ನೋಡಿ ವಿನೋದದಿ ನಸುನಗೆಯಿಂ ಮುದ್ದು |
ಮಾಡಿ ವ್ಯೆಯಾರದಲಿ ||
ಕೂಡಲೆ ಬಹೆನಿಂದು ಕಾಡದಿರೆಂದೆನು |
ತಾಡಿ ಸಂತೈಸುತ್ತಲಿ ||25 ||

**ಭೈರವಿ - ಝಂಪೆ**

ಅಂತಿಂತೊಡಂಬಡಿಸಿ | ಕಾಂತೆಯನು ಬಿಗಿದಪ್ಪಿ |
ಸಂತಸದಿ ಮುದ್ದಿಸುತ | ದಂತಿವಾಹನನು || 26 ||
ಸಕಲ ಸನ್ನಾಹ ಸಹಿ | ತಖಿಲ ವೈಭವದಿಂದ |
ಅಖಿಲಾಂಖಿರೊಡಗೂಡಿ | ಮುಕುತಿದಾಯಕನು || 27 ||
ವೃಂದಾರಕನು ನಿಜ | ಮಂದಿರದ ರಕ್ಷೆ ನಿಮ |
ಗೆಂದು ಪೊರವಂಟನು ಪು | ರಂದರನು ಜವದಿ || 28 ||

**ನಾಟಿ - ಏಕ**

ಪೂಜೆಗೆನ್ನುತ್ತ ಬಂದನಿಂದ್ರ | ಸಂತೋಷದಿಂದ | || ಪ ||
ರಾಜಿಸುತಿಹ ಬಿಳಿ ತೇಜಿಯನೇರುತ |
ಮೋಜಿನಿಂದೊಲಿದಾ | ರಾಜಶೇಖರನ | ಪೂಜೆ || 29 ||
ಯಕ್ಷ ಗಂಧರ್ವರ | ಮೊತ್ತದೊಡನೆ ತ್ರಿ |
ಯಕ್ಷನ ನೋಳ್ಪಾ | ಪೇಕ್ಷೆಯೊಳೊಲಿದು || ಪೂಜೆ || 30 ||
ಪೂರ್ವಾಮರರನು | ನಿರ್ವಹಿಸುವನತಿ |
ಗರ್ವವ ಬಿಡದಾ | ಸರ್ವಾತ್ಮಕನ | ಪೂಜೆ || 31 ||
ಕುಜನಕುಠಾರನ | ನಿಜಮೂರ್ತಿಯ ಪದ |
ಭಜಿಸುವೆನೆನುತಾ | ರಜತಾಚಲಕೆ || ಪೂಜೆ || 32 ||

**ವಾರ್ಧಕ**

ಸದಮಲರು ಕೇಳಿರೈ ದಿವಿಜಸಂದೋಹ ಸಹ |
ವಿಧವಿಧಾಟಗಳಾಡುತರ್ತಿಯಿಂ ನಲಿನಲಿದು |
ಮದನಾರಿಯಂಘ್ರಿಯಂ ಕಾಂಬ ಕಡು ತವಕದಿಂದದ್ರಿಕುಲಗಜಸಿಂಹನು ||
ಪದುಳವಿಡಿದಯ್ತರುತ ತೃಷೆಯಡಸಿ ಪಥದೊಳಗೆ |
ಉದಕಮಂ ಅರಸಿ ಕಾಣದೆ ಬಳಲುತಿರೆ ನೋಡಿ |
ಯೊದಗಿದರ್ ಪೂರ್ವವೈರವ ಸಾಧಿಸಲ್ಕಿದೇ ಸಮಯವೆಂದೆನುತಸುರರು || 33 ||

**ಕಂದ**

ಬಾಯಾರಿಕೆಯಿಂ ಬಳಲುವ |
ದಾಯಿಗರನ್ನೀಕ್ಷಿಸಿ ಖಳವೃಂದಾರ್ಭಟದಿಂ ||
ಮಾಯದಿ ಸುರರನು ಗೆಲುವವು |
ಪಾಯವ ತಾವ್ ತಮ್ಮೊಳಗಿಂತೆಂದರು ಭರದಿಂ || 34 ||

**ಕಾಂಬೋಧಿ - ಝಂಪೆ**

ಖಳ ಕುಂಭಕೇತನತಿ | ಬಲ ನಿಕುಂಭನು ಶಂಖ |
ಶಲಭನತಿಕಾಯ ಕೃತವೀರ್ಯ ||
ಗಳಸು ಭೇತಾಳರೆನಿ | ಪಿಳಿಯ ಭಾಧಕರೆಲ್ಲ |
ತಿಳಿದೊರೆದರತಿ ಕೃತಕ ಕಾರ್ಯ || 35 ||
ಅಣ್ಣಾಗಳಿರಿದ ಕೇಳಿ | ಪುಣ್ಯಫಲ ಕೈಗೂಡಿ |
ತೆಣ್ಣೆಸದ ಕಾರ್ಯವೀಗೆಮಗೆ ||
ಹಣ್ಣೆತಿದೆ ನೋಡಿ ಮು | ಕ್ಕಣ್ಣನಿದ್ದೆಡೆಗೆ ಮೈ |
ಗಣ್ಣನಯ್ದುವನು ಪಥವಿಡಿದು || 36 ||
ಆಸರದಿ ಬಳಲಿ ಬಾ | ಯಾರಿ ಬೆಂಡಾಗಿ ಬಲು |
ಬೇಸರದೊಳಿಹನು ಸುರನಾಥ ||
ಈ ಸಮಯದೊಳಗೊಂದು | ಕೊಡದಿ ಮಧುವನು ತುಂಬು |
ತಾ ಸುರೆಯ ಪಾತ್ರದೊಳಗೀಗ || 37 ||
ಅಣುರೂಪದಿಂದಿರ್ದು | ಸುರಪನುದರದಿ ಪೊಕ್ಕು |
ತ್ರಿಣಯನೆಡೆಗಯ್ದಬೇಕಲ್ಲಿ ||
ಕೆಣಕಬೇಕೆಮ್ಮ ನಿಜ | ಗುಣದೊಳಾ ಸಭೆಯೊಳಗೆ |
ಜಣುಗುತಗಜೇಶ ರೌದ್ರದಲಿ || 38 ||
ತೆರೆವನುರಿನಯನದಾ | ಭರಕೆ ದಹಿಸುವ ಸುರಪ |
ನರಿದು ಮೈದೆಗೆದಿರಲುಬೇಕು ||
ಅರಿಗಳಿಂದೆಮಗವರ | ಪುರವು ಕೈಸೇರಿ ಬಳಿ |
ಕಿರಬಹುದು ಸೌಖ್ಯದಿಂದೆನಲು || 39 ||

**ಕೇದಾರಗೌಳ - ಅಷ್ಟ**

ಎಂದ ನಿಕುಂಭನ ನುಡಿಯ ಕೇಳುತ ಖಳ |
ವೃಂದವು ಹರುಷವೆತ್ತು ||
ಸಿಂಧುಘೋಷದಿ ನಸುನಗೆಯ ಬೀರುತಲಾಗ |
ಲೆಂದನು ಕುಂಭಕೇತ || 40 ||
ಲೇಸಿದು ಸೂಚನೆ ತೋರ್ಪುದೆಮ್ಮವರಿಗೆ |
ಈಶನ ಮುಖದಿಂದಲಿ ||
ಗಾಸಿಗೆಯ್ಸುವೆ ಯತ್ನ ಗೆಯ್ವೆನೀಕ್ಷಣದಲಿ |
ವಾಸವಗೆಂದೆನುತ || 41 ||
ಸುರರಿಗಗೋಚರವಾದಣುರೂಪಿನಿಂ |
ದುರುಳ ತಾ ಮಧುವಿನೊಳು ||
ಇರಲಾ ಪಾತ್ರೆಯ ಕೊಂಡು ಖಳನೋರ್ವ ಕಪಟದಿ |
ಬರೆ ಸುರರೀಕ್ಷಿಸುತ್ತ || 42 ||

ದಾನವರೆಸಗಿದ ಕೃತಕವನರಿಯದೆ |
ಪಾನಾಭಿಲಾಷೆಯಿಂದ ||
ಮಾನವರಂದದಿ ಸುರರು ದೈತ್ಯನೊಳು ಸು |
ಮ್ಮಾನದಿಂದಿಂತೆಂದರು || 43 ||

**ನಾದನಾಮಕ್ರಿಯೆ - ಅಷ್ಟ**

ಎಲ್ಲಿಗೆ ಒಯ್ವೆಯೋ ಮಧುವನು | ತಾ |
ರಿಲ್ಲಿ ಮುಂದಕೆ ಪೋಗದಿರು ನೀನು ||
ಬಲ್ಲಿದಾಸರದಿ ನಮ್ಮೊಡೆಯನು | ನೀ |
ರೆಲ್ಲಿಯು ಕಾಣದೆ ಬಳಲ್ವನು || 44 ||
ತಡೆಯದದನಂ ಕೇಳಿ ನುಡಿದನು | ನಿ |
ನ್ನೊಡೆಯನಂಜಿಕೆ ನಿನಗೆನಗೇನು ||
ತಡೆಯದೆ ದಾರಿಯ ಬಿಟ್ಟುತ್ತ | ನಡೆ |
ನಡೆಯೆಂದು ಮುಂದೊತ್ತಿ ಸರಿಯುತ್ತ || 45 ||
ಧಿಕ್ಕರಿಸಲಿಕಂದು ಸುರಪನು | ಬಲು |
ಅಕ್ಕರದಲಿ ಕೇಳೆ ಖಳ ತಾನು ||
ತಕ್ಕೊಳ್ಳೆಂದೀಯೆ ಕೈಗೊಂಡದ | ಕುಡಿ |
ದುಕ್ಕಲು ಖಳನತ್ತ ಸಾರಿದ || 46 ||

**ಭಾಮಿನಿ**

ಮಧುವಿನೊಳಗಣುವಾಗಿ ಸೇರಿ |
ರ್ದಧಮರಕ್ಕಸ ಪಾನದೊಳಗಿಳಿ |
ದುದರದೊಳಗಾವಾಸವಾದುದ ತಿಳಿಯದಮರೇಂದ್ರ ||
ಪದುಮಬಾಣಧ್ವಂಸಕನ ಶ್ರೀ |
ಪದವ ನೆನೆದಯ್ತರುತ ಮುಂದಿಹ |
ಚದುರ ವನವನು ನೋಡಿ ವೃಂದಾರಕರೊಳಿಂತೆಂದ || 47 ||

**ಕಾಂಬೋಧಿ - ಝಂಪೆ**

ನೋಡಿರೈ ಬಲದವರು ವನದ ವೈಭವಗಳನು |
ನೋಡಿರೈ ಸಕಲ ವಸ್ತುಗಳ ||
ನೋಡಿರೈ ಚೂತ ಮಾದಲ ಬದರಿ ದ್ರಾಕ್ಷೆಗಳ |
ನೋಡಿರೈ ಜಂಬು ನಿಂಬೆಗಳ || 48 ||
ನೋಡಿರೈ ಪನಸ ಧವಳೇಕ್ಷು ವರ ಕಲ್ಪದ್ರುಮ |
ನೋಡಿರೈ ಕದಳಿ ಖರ್ಜೂರ ||
ನೋಡಿರೈ ಮರುಗ ಮಲ್ಲಿಗೆ ಜಾಜಿ ಮಂದಾರ |
ನೋಡಿರೈ ಸುರಗಿ ಸಂಪಗೆಯ || 49 ||
ನೋಡಿರೈ ಹರಿಣ ನರಿ ಶರಭ ಕರಿಹಿಂಡುಗಳ |
ನೋಡಿರೈ ಚಮರಿಮೃಗತಂಡ ||
ನೋಡಿರೈ ನವಿಲು ಗಿಳಿ ಕೋಕ ಬಕ ಹಂಸೆಗಳ |
ನೋಡಿರೈ ವರ ಮಿಳಿಂದಗಳ || 50 ||
ನೋಡಿರೈ ಪರಿವ ಜಲ ಕೊಳನ ಪರಿಮಳದಿಂದ...... |
ನೋಡಿರೈ ಪರಿವಾರಗಳನು ||
ನೋಡಿರೀಪರಿಯ ಶೋಭಿಪ ವನದ ಮಧ್ಯದಲಿ |
ರೂಢಿಸಿಹ ಭ್ರಮರಾಳಿಗಳನು || 51 ||
ಚಾರು ಚಂದಿರನಂತೆ ಥಳಥಳಿಸುತಿದೆ ಕ್ಷೀರ |
ವಾರಾಶಿಯಂತೆ ರಂಜಿಪುದು ||
ಮಾರಾರಿಯನು ಶಿರದೊಳಾಂತು ನಿಂದಿಹುದು ನಗ |
ವಾರಪತಿಯಿಂ ರಜತಗಿರಿಯು || 52 ||

ಶಿವ ಶಂಭು ಶಂಕರ ಸದಾನಂದ ಪಾರ್ವತೀ |
ಧವ ಪಂಚಮುಖ ಜ್ವಾಲನೇತ್ರ ||
ಶಿವ ನಮೋ ಶಶಿಕಂಠ ಸಲಹೊ ಸರ್ವೇಶ ತ್ರಿ |
ಭುವನೈಕವರ ಪುಣ್ಯಸ್ತೋತ್ರ || 53 ||
ಇಂತೆನುತ ರಜತಾದ್ರಿ ಪೊಗಳುತೇಕೋದೃಢದಿ |
ಕಂತುಹರನಡಿಯ ಧ್ಯಾನಿಸುತ ||
ಸಂತಸದಿ ಕೈಲಾಸಗಿರಿಯನಡರಿದ ಶಚೀ |
ಕಾಂತ ನಲವಿನಲಿ ನಸುನಗುತ || 54 ||

**ಭೈರವಿ - ತ್ರಿವುಡೆ**

ಕಂಡನಾಗ | ಶಕ್ರನು | ಕಂಡನಾಗ || ಪ ||
ಕಂಡನಾ ರಜತಾದ್ರಿಯೊಳಗಾ |
ಖಂಡಲನು ಭಜಿಸುತಲಿ ನೆರೆದಿಹ |
ಹಿಂಡು ಮುನಿಗಳು ಕೂಡಿ ಶಿವಸ್ತುತಿ |
ಗೊಂಡು ಏಕೋದೃಢದಲಿ ||
ಮಂಡೆಕೆದರಿನ ಕಯ್ಯ ಜಪಸರ |
ಕಂಡು ಬೆರಳೆಣಿಸುತ್ತಲಿ |
ಚಂಡ ತಪದೊಳಗಿರುವ ಋಷಿಗಳ |
ತಂಡಕೆರಗುತಲತಿ ವಿಲಾಸದಿ || ಕಂಡ || 55 ||
ಮುಂದುವರಿದಯ್ತರುತ ಪಾಟಕ |
ವೃಂದ ಘೋಷಗಳಾಡುತ ||
ಮುಂದೆ ಬರಲಪ್ಸರೆಯರುಗಳತಿ |
ಚಂದದಿಂದಲಿ ಕುಣಿವುತ |
ಸಿಂಧುಶಯನನ ರಾವಿಗಿದೆ ಸರಿ |
ಯೆಂದು ಪೊಗಳುತಲರ್ತಿಯಿಂದಲಿ || ಕಂಡ || 56 ||
ಎಡಬಲದಿ ಸುರವಾರ ಪ್ರಮಥರ |
ಗಡಣ ಜಯ ಜಯವೆನ್ನುತ |
ಮೃಡನ ಮುಂಗಡೆ ವೀರಭದ್ರನು |
ಪಡೆಸಹಿತ ಝೇವಡೆಸುತ ||
ಕಡು ಬೆಡಗಿನಿಂ ತುಂಬುರರ ಗರ |
ಬಡೆಯ ಬಲು ಸ್ವರವೇಳುತ |
ಬಿಡುಜಡೆಯ ಸುರಗಂಗೆಯುಡುಪನು |
ಮುಡಿಯ ಮೇಲ್ ಪ್ರಜ್ವಲಿಸುತಿರ್ಪುದ || ಕಂಡ || 57 ||
ಚಾರುತರ ನವರತ್ನ ಮಣಿಮಯ |
ಹಾರ ಕಂಠದೊಳೆಸೆವುತ |
ಭೂರಿಗಣ ಫಣಿಭೂಷ ಪೆರ್ಬುಲಿ |
ವಾರಣಾಂಬರವೆಸೆವುತ ||
ಕಾರಣೀಕ ಕಪಾಲಧರ ಶ್ರುಂ |
ಗಾರನಯನದ ಅಭಯ ಹಸ್ತದ |
ಭೂರಿ ನಿಗಮವಿಚಾರನೆಡದಲಿ |
ಚಾರು ಗೌರಿಯುದಾರ ಶೌರ್ಯನ || ಕಂಡ || 58 ||

**ಕಂದ**

ಸುರವರನೀ ತೆರದಿಂದೈ |
ತರುವುದನೀಕ್ಷಿಸಿ ಕವಾಟಕರ್ ಭರದಿಂದಂ ||
ಹರಿತಂದಾಕ್ಷಣದಿಂ ಸ್ಮರ |
ಹರನಡಿಗೆರಗುತ ನುಡಿದರು ಸುರಪನ ಬರಮಂ || 59 ||

**ಸಾರಂಗ - ಆದಿ**

ಸ್ವಾಮಿ ಪರಾಕು ಜೀಯ | ಗಿರಿಜಾಪ್ರಿಯ |
ಸ್ವಾಮಿ ಪರಾಕು ಜೀಯ || ಪ ||
ಮೈನಯನನು ಸುರ | ಸೈನ್ಯವ ನೆರಹಿ ದ್ವಾರ |
ಕಯ್ತಂದಿಹನನುನಯವೇನಿನ್ನು || ಸ್ವಾಮಿ || ಅ.ಪ ||
ನಿಲ್ಲು ನಿನ್ನೊಳಗೈವ | ರಿಲ್ಲವೆ ಹುಕುಂ ದೇವ |
ಗುಲ್ಲು ಮಾಡುತಲಿ ಬಂದು | ಬಹು |
ಝಾಲ್ಲಿಗಳಿಂದು || ಸ್ವಾಮಿ || 60 ||
ತವ ಚರಣಾರವಿಂದ | ಕ್ಕವ ನಮಿಸುವೆನೆಂದ |
ಶಿವ ಶಿವ ಶಿವಯೆನ್ನುತ್ತ | ವಿವರಿಸದಾತ || ಸ್ವಾಮಿ || 61 ||
ಚರನ ಮಾತಿಗೆ ಇಂದು | ಧರನು ಪೇಳಿದನಂದು |
ಸುರಪ ಬರಲೊಳಗೆಂದ | ಸರಿದ ಸಂಕ್ರಂದ || ಸ್ವಾಮಿ || 62 ||

**ಭಾಮಿನಿ**

ಗರುಡ ಗಂಧರ್ವಾದಿ ಸುರಗಣ |
ವರ ಮಹೋರಗ ಸಿದ್ಧ ವಿದ್ಯಾ |
ಧರ ಮಹಾಮುನಿವ್ರಜ ಸಮಾಧಿಯೊಳಸ್ಮೃಶ್ರುತಿಮತದ ||
ಭರಿತಘೋಷದೊಳೆಸೆವ ತಾರಾ |
ವರಸಮೂಹದ ಶಶಿಯ ತೆರದಲಿ |
ಮೆರೆವ ತೇಜಃಪುಂಜ ಗಿರಿಜಾವರನನೀಕ್ಷಿಸುತ || 63 ||

**ವಾರ್ಧಕ**

ಈಸು ವೈಭವದಿ ಶಿವನೋಲಗದೊಳಿರಲಾಗ |
ಆ ಸುರೇಶ್ವರನಯ್ದಲಾ ಸಭಾಸ್ಥಳದಿ ಖಳ |
ವಾಸವನ ಹೃದಯಮಂ ಕದಡುತತಿಕೋಪಮಂ ಬರಿಸೆ ಬಳಗವನೀಕ್ಷಿಸಿ ||
ಈಸು ದಿನ ಬರಲೆನ್ನ ಸನ್ಮಾನಿಸುವನು ಜಗ |
ದೀಶನಿಂದೇಕಿದಿರು ಬರಲಿಲ್ಲವೆನುತ ತಾ |
ರೋಷಕಾರ್ಮುಖನಾಗಿ ಪ್ರಳಯಭೈರವನಂತೆ ಗಜರುತ್ತಲಿಂತೆಂದನು || 64 ||

**ಭೈರವಿ - ಏಕ**

ಇಂತೆನುತಲಿ ಕ್ರೋಧದಲಿ | ಶಚಿ |
ಕಾಂತನು ದೈತ್ಯಾಂಶದಲಿ ||
ಪಂತದೊಳಾ ಶಂಕರನ | ಕಂ |
ಡಿಂತೆಂದನು ಮೈನಯನ || 65 ||
ಶರ್ವನೆಂದರ್ಚಿಪೆ ನಿನಗೆ | ಈ |
ಗರ್ವವು ದೊರಕಿತೆ ಹೀಗೆ ||
ನಿರ್ವಹಿಸುವೆನೆಂದೆನುತ | ಸು |
ಪರ್ವನು ಬಲು ಗರ್ಜಿಸುತ || 66 ||
ಕರದಲ್ಲಿಹ ವಜ್ರದೊಳು | ಆ |
ಉರಗಭರಣನ ಕಂಠದೊಳು ||
ಭರದಿಂ ಹೊಯ್ದಪ್ಪಳಿಸೆ | ಆ |
ಸುರರೆಲ್ಲರು ಗಜಬಜಿಸೆ || 67 ||
ಆರುಭಟೆಯ ಕೇಳುತಲಿ | ಆ |
ವೀರಭದ್ರ ಬೇಗದಲಿ ||
ಕಾರಣವೇನಿದುಯೆಂದು | ವಿ |
ಚಾರಿಸುತಲಿ ನಡೆತಂದು || 68 ||
ಹರನೊಳು ತಾ ಕೈಮಾಡೆ | ತರ |
ಹರಿಸುವ ಸುರಪನ ನೋಡಿ ||
ಕರೆದೆಳೆದೊಯ್ಯುತ್ತಾಗ | ಭೋ |
ರ್ಗರೆದನು ವಜ್ರಿಯೊಳ್ ಬೇಗ || 69 ||

**ಭೈರವಿ - ಆದಿ**

ಎಲವೊ ದೇವೇಂದ್ರ ಕೇಳು | ಶಿವನನರ್ಚಿ |
ಸಲು ಪೋಪೆನೆನುತೆನ್ನೊಳು ||
ಒಳಗಯ್ದಿ ದ್ರೋಹವ ಗೆಯ್ದೆ ಶಂಕರನಿಗೆ |
ಬಲು ಖೂಳ ಕೇಳು ನಿನ್ನ || 70 ||
ಶಿರವ ಚೆಂಡಾಡಿಸದೆ | ಬಿಟ್ಟರೆ ಮುಂದೆ |
ಪರಿಹಾರವೆಮಗಿಹುದೆ ||
ಹರದ್ರೋಹಿ ನಿನ್ನ ನಿಗ್ರಹಿಸುವೆನೆನುತಿಟ್ಟ |
ವರ ಮುಷ್ಟಿಘಾತದೊಳು || 71 ||
ಹಮ್ಮೈಸಿ ಸುರಪತಿಯು | ಮರಳಿಯೆದ್ದು |
ಘಮ್ಮನೇರಲು ಖತಿಯು ||
ಸುಮ್ಮನೆ ನಡೆ ವೀರಭದ್ರ ನಿನ್ನಯ ಒಣ |
ಹೆಮ್ಮೆಯ ಬಲ್ಲೆ ನಾನು || 72 ||
ಎಂದಿಟ್ಟ ವಜ್ರವನು | ಆಧರಿಸುತ್ತ |
ಸ್ಕಂದಾಗ್ರಜನು ಪೇಳ್ದನು ||
ಮಂದಮತಿಯೆ ನಿನ್ನ ಕೊಲಲಮರತ್ವಕೆ |
ನಿಂದೆ ಬಪ್ಪುದು ಎನುತ || 73 ||
ಇರಿದ ಕಠಾರಿಯನು | ತಪ್ಪಿಸಿಕೊಂಡು |
ಭರದಿ ಸಂಕ್ರಂದನನು ||
ಸುರಗಿಯೊಳಿರಿಯಲು ವಂಚಿಸಿ ಖಂಡೆಯ |
ಒರೆಯಿಂದಲುಗಿದೆಂದನು || 74 ||
ಹರಿ ಹರ ದ್ರೋಹಿಗಳ | ಶಿಕ್ಷಿಸುವಂಥ |
ದೊರೆತನವೆನಗೆ ಕೇಳಾ ||
ದುರುಳನೆ ಸಾರೆನುತೆರಗಲು ಬೆದರದೆ |
ಸುರಪನಾಂತಿರೆ ಕಾಣುತ್ತ || 75 ||

**ಘರಜು - ಆದಿ**

ಯಾಕೆ ಪುಟ್ಟಿದೆ ಸುರಕುಲದೊಳು | ದ್ರೋಹಿ |
ಯಾಕೆ ಜನಿಸದಾದೆ ಖಳರೊಳು ||
ಈ ಕುಟಿಲಗಳೆಲ್ಲಿ ಕಲಿತವ | ತಾಳೆಂ |
ದಾ ಖಂಡೆಯದಿ ಪೊಯ್ಯಲಿಕ್ಕವ || 76 ||
ತೋರದಿರ್ ಪೆಣಮುಸುಡೆನ್ನುತ | ಸುಡು |
ಸಾರು ಸುಮ್ಮನೆ ಸಾಯದಿರು ವ್ಯರ್ಥ ||
ಘೋರ ಪಾತಕಿಯೆಂದು ಹೊಡೆದನು | ಕ |
ಯ್ಯಾರೆ ತಡೆವುತಾಗ ಶಕ್ರನು || 77 ||
ಹೆಣಗಳ ತಲೆ ಕಟ್ಟಿಕೊಂಡಿಹೆ | ನೀನು |
ಕುಣಿದಾಡಿ ಕೂಗಿ ಬಾಯ್ಬಿಡುತಿಹೆ ||
ಹೆಣಗಾಡಿ ಕೆಡುವೆ ಪೇಳಿದೆ ಸಾರಿ | ಎಂದು |
ಅಣಕಿಸಿ ಹೊಡೆದನು ಬಲವೈರಿ || 78 ||

**ವಾರ್ಧಕ**

ವೀರ ಭಟರೆಚ್ಚಾಡಿ ಬಲದಿಂದ ಚಲದಿಂದ |
ಮೀರಿ ಕಡು ಕೋಪದಲಿ ಶರದಿಂದ ಕರದಿಂದ |
ವಾರಿಜಭವಾಂಡ ಬಾಯ್ಬಿಡುವಂದದೊಳಗಂದವರು ಬಲು ಪ್ರತಾಪದಿಂದ ||
ಗಾರುಗೆಡದಿಂತು ಹೊಯ್ದಾಡಿದರ್ ತೀಡಿದರ್ |
ಕ್ರೂರ ಖಡ್ಗ ಕಠಾರಿಯಿರಿತದೊಳ್ ಶರತದೊಳ್ |
ಕಾರಣೀಕನ ಮುಂದೆ ಹೆಣಗುತಲೆ ಜುಣುಗದಲೆ ಸಮಕಳಿಸಿ ಕಾದಾಡುತ || 79 ||

**ಕಂದ**

ಬಿಡದೀ ಪರಿಯಿಂದಂ ಕಡಿ |
ಹೊಡೆಯೆನುತಿರುವರ ಪುರಾರಿಯೀಕ್ಷಿಸುತಾಗಂ ||
ತಡೆದಂ ತನ್ನಯ ಜಡೆಯಂ |
ಪೊಡೆದುದಿಸಿದನಂ ಕರೆದವನೊಡನತಿ ಮುದದಿಂ || 80 ||

**ಭಾಮಿನಿ**

ಮಗನೆ ಬೇಡೀ ಶಕ್ರನೊಳು ನೀ |
ಮಿಗುವರಿದು ಕಾದಿದರು ನಿನ್ನನು |
ಬಗೆಯನೀತಗೆ ಪ್ರಲಯ ಹೊರತವಸಾನವಿಲ್ಲೆನುತ ||
ಭುಗಿಲೆನುವ ನಿಟಿಲಾಕ್ಷಿ ತೆರೆಯಲು |
ಜಗ ದಹಿಪವೋಲೆಸೆಯೆ ಕಂಡಾ |
ಪಗೆಯವಗೆ ಕಡೆಗಾಲ ಬಂತೆಂದೊಡಲೊಳಿದ್ದಸುರ || 81 ||

**ಕಂದ**

ಒಡಲೊಳಗಿಂದಂ ಮೆಯ್ದ್ವಗೆ |
ದೊಡೆ ಬದುಕಿದೆನೆಂದೋಡುತಾಶ್ರುಮದತ್ತಂ ||
ನಡೆಯಲ್ಕಿತ್ತಂ ಬಿಡುಗ |
ಣ್ಣೊಡೆಯಂ ಕಂಗೆಡೆ ಸುರಗುರು ಮೃಡಂಗೆ ನುಡಿದಂ || 82 ||

**ಸಾಂಗತ್ಯ - ರೂಪಕ**

ಹರ ಹರ ಏನು ವಿಚಿತ್ರವು ಶಿವ ಶಿವ |
ಕರುಣಾಸಾಗರ ನೀನೀ ತೆರದಿ ||
ಚರಣ ಸೇವಕರಲ್ಲಿ ಕೋಪಿಸಿದರೆ ಮುಂದೆ |
ಹರಣ ಕಾವರ ತೋರೈ ಮುದದಿ || 83 ||
ನೀಲಕಂಧರ ನಿನ್ನಂಘ್ರಿಗಳಾಶ್ರಯಿಸಿಹ ಸುರ |
ಪಾಲನ ಮೇಲೆ ಮುನಿಯುವುದೆ ||
ಮೂಲೋಕ ಭಸ್ಮಿಪ ಕಾಲದಿ ತೆರೆವಂಥಾ |
ಭಾಳಲೋಚನವ ತೆರೆಯುವುದೆ || 84 ||
ಎರಗಲಾ ವಾಮಾಕ್ಷಿ ಭರಕಾನಲಾರದೆ |
ಸುರಗಿರಿ ಧರೆಗೊರಗುವುದೆ ||
ಭರದತಿ ತೃಷೆಯೆಂದು ಇರದೆ ನೀರ್ಗೊಳುತಲಾ |
ಸರಿಸಲು ಶರಧಿ ಬತ್ತುವುದೆ || 85 |
ಪುಟ್ಟಿಸುವನು ನೀನೆಯೀರೇಳು ಲೋಕವ |
ಕೊಟ್ಟು ಸಂರಕ್ಷಿಪ ನೀನೆ ||
ತುಟ್ಟ ತುದಿಗೆ ಸಮರ್ಪಕ ಕಾಲದಲಿ ಜಗ |
ಸುಟ್ಟುರುಹುವ ಕರ್ತೃ ನೀನೆ || 86 ||
ಕಿರಿಯರೇನಪರಾಧ ಗೆಯ್ದರು ಗುಣದಿಂದ |
ಹಿರಿಯರಾದವರದ ಕ್ಷಮಿಸಿ ||
ಪರಿಪಾಲಿಸುವನೆಂಬ ಬಿರುದುಳ್ಳ ದೊರೆ ನೀನೆಂ |
ದೊರೆಯಲೆಂದನು ಸ್ಮರಧ್ವಂಸಿ || 87 ||

**ಸೌರಾಷ್ಟ್ರ - ತ್ರಿವುಡೆ**

ದೇವಗುರುವರ ನಿಮ್ಮ ನುಡಿಗಳ |
ನಾವದನು ಮೀರುವೆವೆ ಮನದೊಳು |
ಭಾವಿಸಲು ಮುಂಬರಿದು ಕಾರ್ಯವು | ಶೀವಿತಲ್ಲೈ || 88 ||

ತೋರುಪಾಯವ ಗೆಯ್ವೆನೆನುತಲಿ |
ಭೂರಿ ಹರುಷದಿ ಪೇಳುತಿರಲಾ |
ಮಾರಮರ್ದನಗೆಂದ ದಿವಿಜಾ | ಚಾರ್ಯವರ್ಯ || 89 ||
ಧರೆಯ ಕದ್ದೊಯ್ದ್ಯಸುರನಿಂದವ |
ತರಿಸಿಹರು ನಿನ್ನಿಂದ ಮರಣವು |
ದೊರಕಲೆಂದಜನಿಂದ ಪಡೆದಿಹ | ವರದ ಬಲದಿ || 90 ||
ಸುರರ ಬಾಧಿಪರಾಗಿ ವರುಣನ |
ಪುರಸಮೀಪದೊಳಿಹರು ಕ್ರೋಧವ |
ಶರಧಿಯೊಳಗಿಡೆ ಹನನವಹರೈ | ದುರುಳರೆನಲು || 91 ||
ಮೃಡನು ಪಣೆಗಣ್ಣಿಂದ ರೋಷದ |
ಕಿಡಿಯನಬ್ಧಿಯೊಳಿಡಲು ನಿರ್ಜರ |
ರೊಡೆಯ ಜಯ ಜಯವೆನುತಲಘಹರ | ನಡಿಗೆ ನಮಿಸಿ || 92 ||
ಕುಸುಮಮಂಜರಿಯಿಂದಲರ್ಚಿಸಿ |
ಕುಸುಮಬಾಣಧ್ವಂಸಕನ ಪದ |
ಬಿಸರುಹಕೆ ಆರತಿಯನೆತ್ತಿದ | ಕುಶಲದಿಂದ || 93 ||

**ಸೌರಾಷ್ಟ್ರ - ಏಕ**

ಎತ್ತಿದನಾರತಿಯ | ಶಕ್ರನು |
ಎತ್ತಿದನಾರತಿಯ || ಪ ||
ಫಣಿಗಣಭೂಷನಿಗೆ | ಶರ್ವಗೆ |
ಮಣಿಮಯಪೀಠನಿಗೆ ||
ವನರುಹಶರಹರಗೆ | ಸಾಂಬಗೆ |
ಘನಮಹಿಪೂರ್ಣನಿಗೆ || 94 ||
ಗಜಚರ್ಮಚೇಲನಿಗೆ | ಅಭವಗೆ |
ಅಜ ಸುರವಂದ್ಯನಿಗೆ ||
ಭಜಕಜನಾಪ್ತನಿಗೆ | ಶಿವನಿಗೆ |
ರಜತಗಿರೀಶನಿಗೆ || 95 ||
ನಂದನಂದನಸಖಿಗೆ | ತ್ರಿನೇತ್ರಗೆ |
ನಂದಿವರೂಢನಿಗೆ ||
ಅಂಧಕಾಸುರಹರಗೆ | ಪಂಚಾಸ್ಯಗೆ |
ಚಂದಿರಶೇಖರಗೆ || 96 ||

**ವಾರ್ಧಕ**

ಜಯ ಜಯ ಜಗತ್ಪಾಲ ಗುಣಶೀಲ ಶಿವೆಲೋಲ |
ಜಯ ಚಾರುಚಾರಿತ್ರ ಸಾಧುಜನಕುಲಮಿತ್ರ |
ಜಯ ದುಷ್ಟಕುಲಮಿತ್ರ ಸುರನರೋರಗಶ್ರೇಷ್ಠ ಜಯ ನಮೋ ಜಯ ಕಪರ್ದಿ ||
ಜಯ ಶರ್ವ ಸರ್ವೇಶ ನಿಗಮನಿರ್ಮಲಘೋಷ |
ಜಯ ವನಜಸಖಿಕಿರಣ ಭುಜಗರತ್ನಾಭರಣ |
ಜಯ ದಂತಿವಕ್ತ್ರಪಿತ ಲಕ್ಷ್ಮೀಶಸುಪ್ರೀತ ಜಯತು ಕೈಲಾಸವಾಸ || 97 ||

**ಮಾಧವಿ - ಏಕ**

ಶರಣು ಶರ್ವ ಸರ್ಪಭೂಷಣ | ಪಾರ್ವತೀಶ |
ವರ ತ್ರಿನೇತ್ರ ತ್ರಿಪುರನಾಶನ || ಪ ||
ಪರಮಪುರುಷ ನಿನ್ನ ಚರಣ |
ಸರಸಿಜಾರ್ಚನೆಯನು ಮನದಿ |
ಸ್ಮರಿಸುತಿರದೆ ಹರುಷದಿಂದಲಿ || ಅ ಪ ||

ಬರಲು ರವಿಯುತ್ಕಟಿತ ತೇಜದಿ | ಭರಿತನಾಗಿ |
ಮೆರೆವ ಮಧ್ಯಾಹ್ನ ಸಮಯದಿ ||
ಸರಸಿಯರಸಿ ಕಾಣದಿರಲು |
ಭರದ ತೃಷೆಯ ತಾಳದುರಿಗೆ |
ಸರದಿ ಮದ್ಯಪಾನಗೆಯ್ಯಲು || 98 ||
ದಿತಿಜರಾದಿ ವೈರದಿಂದಲಿ | ಎನ್ನೊಳೀಗ |
ಕೃತಕಗೆಯ್ವರೇನೊ ಪಥದಲಿ ||
ಮತಿಗೆ ಗೋಚರಿಸದೆನ್ನೊಳ್ |
ಖತಿಯ ತಾಳ್ವೆನೆಂದು ಬೃಹ |
ಸ್ಪತಿಯು ಪೇಳ್ವರಿಂದಲರಿತೆನು || 99 ||
ಗಿರಿಜೆಯರಸ ತವ ಪದಾಬ್ಜದ | ದಾಸನಾ |
ನರಿಯದೆಯಪರಾಧ ಗೆಯ್ವುದ ||
ಮರೆತುಯೆನ್ನ ರಕ್ಷಿಸೆನುತ |
ಚರಣಕೆರಗಲೆತ್ತುತಮರ |
ವರನೊಳೆಂದ ನೀಲಕಂಧರ || 100 ||

**ಮಧುಮಾಧವಿ - ಏಕ**

ಕರಿವರೂಥನೆ ಕೇಳು | ಮರುಗಿ ನೀ ಮನದಿ ||
ಕರಕರೆಗೊಳದಿರು | ಬರಿದೆ ಈ ತೆರದಿ || 101 ||
ಶರಜನ್ಮ ಗಣಪರ | ತೆರದಿ ಈವರೆಗೆ ||
ಎರವಿಲ್ಲ ನಿನ್ನೊಳು | ಕರುಣವುಂಟೆನಗೆ || 102 ||
ಗುರುವರ್ಯ ಸಹಿತಲಿ | ತೆರಳು ನೀ ಪುರಕೆ ||
ಪರಿತೋಷವೆಮಗೆಂದು | ಹರ ಪುರಂದರಗೆ || 103 ||
ನೇಮವಿತ್ತಾಕ್ಷಣ | ಕಾಮಾರಿಯಡಿಗೆ ||
ಪ್ರೇಮದಿಂದಲಿ ಸುರ | ಸ್ತೋಮಸಹಿತೆರಗೆ || 104 ||
ಸೋಮಶೇಖರನ ಮ | ತ್ತೊಮ್ಮೆ ಸಂಸ್ತುತಿಸಿ ||
ವ್ಯೋಮಕೇಶನು ಸಾರ್ದ | ನಾ ಮಹೋತ್ಸವದಿ || 105 ||

**ವಾರ್ಧಕ**

ಸುರರು ಗುರುಸಹಿತ ಸುರನಾಥನಮರಾವತಿಗೆ |
ಸರಿಯಲಘಹರಕ್ರೋಧಕಿಡಿಯು ದಾನವರ ಸಂ |
ಹರಿಸಿ ಬಳಿಕೊಂದು ಶಿಶುವಾಗಿ ಶರಧಿಯೊಳ್ಸುಳಕಾಡುತಿಹ ಧ್ವನಿಯಾಲಿಸಿ ||
ಭರದೊಳಯ್ತಂದಾ ಮೊಗೇರನೋರ್ವನು ಚೆಲುವ |
ತರಳನಂ ಜಲದಿ ಹಾಕಿದರ್ಯಾರೊ ಪಾಪಿಗಳು |
ಹರ ಮಹಾದೇವೆನುತಲರ್ಭಕನ ಪಿಡಿದೆತ್ತಿ ಮೆಯ್ಯೊರಸಿ ಕೊಂಡಾಡುತ || 106 ||

**ಭಾಮಿನಿ**

ಚೆಲುವತನದಲಿ ಮೆರೆವುದೀಕ್ಷಿಸಿ |
ಸಲಿಲದೊಡೆಯಂಗೀವೆನೆನುತತಿ |
ಗೆಲವಿನಿಂ ಕಯ್ಕೊಂಡು ಶಿಶುವನು ಪಥದಿ ನಲಿನಲಿದು ||
ಘಳಿಲನಯ್ತಂದಾಳಿದನ ಪದ |
ನಳಿನಕೆರಗುತಲರ್ಭಕನ ಮುಂ |
ದಿಳುಹುತಲಿ ನಸುಭೀತಿಯಿಂದಲಿ ಅಳುಕುತಿಂತೆಂದ || 107 ||

**ಕಾಪಿ - ಆದಿ**

ವರುಣಪ್ಪ ಬಿನ್ನಪ ಕೇಣ್ಕು | ಸ್ವಾಮಿ |
ಶರಧಿಯೊಳ್ ಸಿಕ್ಕಿದ ತರಳನ ಕಾಣ್ಕು ||
ಹರನೊಲಿದನು ನಿನಗೆನ್ಕು | ಈ |
ಪರಿ ವಿಚಿತ್ರವ ಹಿಂದೆ ಕಂಡುದಿಲ್ಲೆನ್ಕು || 108 ||
ಹುಣ್ಣಿಮೆ ಚಂದ್ರನ ಬೆಡ್ಗು | ನೋಡು |
ಪುಣ್ಯದ ಫಲದಿಂದ ಹೀಗೆ ಕೈಗೂಡ್ಗು ||
ಬಣ್ಣಿಸಲೇನ್ ಸಿರಿ ಸೇರ್ಗು | ಪಾಲ್ |
ಬೆಣ್ಣೆಗಳಿತ್ತೀಗ ಕೂಸನು ಸಲ್ಗು || 109 ||
ನನ್ನೇನೊ ಭಯ ಮನ್ನಿನೊಳ್ಗು | ಕಳ್ದ |
ನೆನ್ನೀಗ ವಂಶಕೆ ಸಂತಸ ಕೂಡ್ಗು ||
ನಿನ್ನೇನ್ ತೋರಿತೊ ದಯ ಮಾಡ್ಕು | ಮತ್ತೆ |
ಮನ್ಗೆ ನಾನದ ಕೊಂಡು ಬಲು ಬೇಗ ಹೋಯ್ಕು || 110 ||

**ಆರ್ಯ ಸವಾಯಿ - ಏಕ**

ತರಳನನಿತ್ತಂಬಿಗನಿಗೆ ವಸ್ತ್ರಾ |
ಭರಣವಿತ್ತು ಕಳುಹಿಸಿಕೊಡುತ ||
ಕರುಣದಿ ಬಾಲನ ಎತ್ತಿಕೊಳ್ಳುತತಿ |
ಹರುಷದಿ ಸತಿಗೆಂದನು ನಗುತ || 111 ||

**ತೋಡಿ - ಆದಿ**

ಬಾರೆ ಮೋಹನಾಂಗಿ ಬಾ ಬಾ |
ಬಾರೆ ಪ್ರಾಣಕಾಂತೆ ||
ಬಾರೆ ಪೂರ್ಣಚಂದ್ರ ವದನೆ |
ಬಾರೆ ಬಾ ಶೃಂಗಾರೆ || 112 ||
ಸುಗುಣೆ ನೋಡಿದೆಯೇನೆ ಈ |
ಮಗುವ ಕಡಲೊಳಗೆ ||
ಒಗೆದರ್ ಯಾರೊ ತಾನೆ ಬಲೆಗೆ |
ನೆಗೆದು ಬಂದೆಂದೆನಗೆ || 113 ||
ಕಡಲಮರಿಯ ತಂದುಕೊಟ್ಟರ್ |
ಮಡದಿ ರನ್ನೆ ಕೇಳೆ ||
ಒಡನಾಡಿಸೆಂದೆನುತ ಮಗುವ |
ಕೊಡಲಿಂತೆಂದಳಬಲೆ || 114 ||

**ಕೇದಾರಗೌಳ - ಅಷ್ಟ**

ಕಮನೀಯಕರನೆನ್ನ ರಮಣ ಲಾಲಿಸು ನಿರ್ಣ |
ಯಮಿತಗುಣಸುವರ್ಣ ||
ಸುಮನಸರೆಸಗಿದ ಕ್ರಮವೊ ದಾನವರ ಕೃ |
ತ್ರಿಮವೊ ರಂಜಿಪ ಶಿಶುವ || 115 ||
ತಿಳಿದು ನೋಡಲು ಜಲದೊಳಗೇಕೆ ಸೃಜಿಸಿದ |
ನಳಿನಸಂಭವನಿದನು ||
ನೆಲೆಯದನರಿವುದೆಂತೆನೆ ಕೇಳಿ ವರುಣನು |
ನಳಿನಾಕ್ಷಿಗಿಂತೆಂದನು || 116 ||

**ತುಜಾವಂತು - ಝಂಪೆ**

ಚಿಂತೆ ಬೇಡೆಲೆ ಕಮಲ | ದಳನಯನೆ ಇದಕೆ ||
ಕಾಂತೆ ಕೇಳೀತೆರನ | ಗೊಂತುಗೊಳುವುದಕೆ || 117 ||

ಬರಿಸುವೆನು ಸ್ಮರಿಸಿಯಾ | ಸರಸಿಜೋದ್ಭವನ ||
ಪರಿಕಿಸುತಲರ್ಭಕನ | ಪರಿಯ ನಮಗೊರೆವ || 118 ||
ಎಂದುಸುರಿ ರಮಣಿಯೊಳು | ನಿಂದು ಭಕ್ತಿಯಲಿ ||
ಒಂದೆಮನದಿಂದಜನ | ವಂದಿಸಿದ ಮರಳಿ || 119 ||

**ವಾರ್ಧಕ**

ಜಯ ಜಯ ಜಗನ್ಮೂಲ ಸುಗುಣ ವಾಣೀಲೋಲ |
ಜಯ ಜಯಾನೃತದೂರ ನಿಗಮಾಗಮಾಧಾರ |
ಜಯ ಜಯ ಸರೋರುಹಜ ಮಾರ್ತಾಂಡಶತತೇಜ ಜಯ ನಮೋ ಜಯ ಸ್ವಯಂಭು ||
ಜಯ ಜಯ ಜಗಜ್ಯೇಷ್ಠ ತಾಪಸಮನೋಭೀಷ್ಟ |
ಜಯ ಜಯ ಚತುರ್ವದನ ಮೌನಿಜನಹೃತ್ಸದನ |
ಜಯ ಜಯ ಸುವರ್ಣಮಯ ಕೋಮಲಾಮಲಕಾಯ ಜಯವೆಂದು ನುತಿಗೆಯ್ದನು || 120 ||

**ಭಾಮಿನಿ**

ಶರಣಜನ ಸುರಧೇನು ಕರುಣಾ |
ಕರ ಸದಾನಂದೈಕರೂಪನೆ |
ಪರಮಪಾವನ ಪುಣ್ಯಚರಿತೋದ್ಧಾರ ನೀನೊಲಿದು ||
ಕರುಣಿಸೆನ್ನಿಷ್ಟಾರ್ಥವೆನುತಲಿ |
ಶರಧಿಪತಿ ಸಂಸ್ತುತಿಸೆ ಶ್ರುತವಾ |
ಯ್ತಿರದೆ ವಾಣೀವರನು ಶಾರದೆಗರುಹಿ ಪೊರವಂಟ || 121 ||

**ಕೇದಾರಗೌಳ - ಅಷ್ಟ**

ಕಾಂತೆ ಕೇಳೆನ್ನನು ಸ್ಮರಿಸುವ ವರುಣನೇ |
ಕಾಂತಭಕ್ತನ ಬಳಿಗೆ ||
ಇಂತಯ್ದಿ ಬರುವೆನೀಕ್ಷಣವೆಂದು ಸೂಚಿಸಿ |
ಚಿಂತೆವಿರಹಿತನಾಗ || 122 ||
ನಂಬಿದ ಜನರ ಕುಟುಂಬಿ ಸ್ಥೆಯೆನಿಪ ಸ್ವ |
ಯಂಭು ಹಂಸೆಯನಡರಿ ||
ಅಂಬುಜಾಪ್ತನ ಪ್ರತಿಬಿಂಬವೆಂಬಂದದಿ |
ಕುಂಭಿನಿಗಿಳಿದಾಪರಿ || 123 ||
ಕರದ ಪದುಮಮಾಲೆಯೆಣಿಸುತ್ತ ಬಾಯೊಳು |
ಹರಿನಾಮ ನುಡಿವುತಲಿ ||
ಬರುವ ವಿರಿಂಚಿಯನಿದಿರ್ಗೊಂಡು ಕರೆತಂದು |
ಶರಧಿಪ ಹರುಷದಲಿ || 124 ||
ನವರತ್ನಖಚಿತದಾಸನವೇರಿಸುತ ಮತ್ತೆ |
ನವವಿಧರ್ಚನೆಯೆಸಗಿ ||
ಕುವರನ ಕಾಣಿಕೆಯಿತ್ತಂಘ್ರಿಗೆರಗುತ |
ಕುವಲಯಜಗೆ ಪೇಳ್ದನು || 125 ||
ಈ ಮಹಾಜಲದೊಳು ಸಿಕ್ಕಿದ ಶಿಶುವಿನ |
ನಾಮಕರಣ ಗೈವರೆ ||
ನಾ ಮನದೊಳು ನಿನ್ನ ಸ್ಮರಿಸಿದೆನೆನೆ ಕೇಳ್ದು |
ಆ ಮಗುವನು ಕರದಿ || 126 ||
ಪಿಡಿದೆತ್ತಲಾ ಶಿಶು ತೊಡೆಯನೇರುತ ಗಡ್ಡ |
ಪಿಡಿದಲುಗಿದ ನೋವಿಗೆ ||
ಮಿಡುಕುತಲೆಳಿದುದಾ ಥಡಿಗನ ತಲೆಗಂದು |
ಒಡನೆಯೆ ಬಾಷ್ಪಗಳು || 127 ||

ಧರಿಸಲು ಮುಂದಿವನಿಂದಲುತ್ಪಾತವೀ |
ಧರೆಯೊಳಗುಂಟೆನುತ ||
ಅರಿತಾಗ ಪರಮೇಷ್ಠಿ ವರುಣನ ಕರೆದೆಂದ |
ತರಳನ ವಿವರಗಳ || 128 ||

**ಕೇದಾರಗೌಳ - ಝಂಪೆ**

ಹೇಳಿಬಿಟ್ಟಿರುವೆ ನಾನು | ಪೇಳ್ವ ನುಡಿ |
ಕೇಳಯ್ಯ ವರುಣ ನೀನು ||
ಬಾಲನಿವ ಪ್ರೌಢನಹನು | ಮುಂದಿವನ |
ಶೀಲಗಳ ವಿವರಿಸುವೆನು || 129 ||
ಈಶ್ವರನ ಸಂಭೂತನು | ಬದಲು ಪೃ |
ಥ್ವೀಶ್ವರರಿಗಳುಕನಿವನು ||
ವಿಶ್ವಾಸದೊಳು ರಕ್ಷಿಸು | ಶೌರ್ಯಕಮು |
ರೇಶ್ವರರಿಗಳುಕನಿವನು || 130 ||
ಕಡ್ಡತನವೇನೆಂಬೆನು | ಬಿಡದೆನ್ನ |
ಗಡ್ಡ ಪಿಡಿದಲುಗಲಿವನು ||
ಸೊಡ್ಡುರಿಯೆ ಕಣ್ಣೀರನು | ಬಸಿಯಲದ |
ನೊಡ್ಡಿ ಶಿರದೊಳಗಾಂತನು || 131 ||
ಧರಿಸಿದುದರಿನ್ನಿಳೆಯಲಿ | ಪೆಸರಿವಗೆ |
ವರ ಜಲಂಧರನೆನುತಲಿ ||
ಕರೆವುದೀತಗೆ ಪಡೆದನ | ಕೈಯಿಂದ |
ಹೊರತು ಬೇರಿಲ್ಲ ಮರಣ || 132 ||
ಸಂದುದೇ ಮನದಿಷ್ಟವ | ಕೊಳ್ಳೆಂದ |
ನಂದು ಮರಳಿತ್ತು ಮಗುವ ||
ಚಂದದಿಂ ಪೊರೆವುದೆನುತ | ಹರಿಸ್ಮರಣೆ |
ಯಿಂದಲಜ ಪುರಕೆ ನಡೆದ || 133 ||

**ಸೌರಾಷ್ಟ್ರ - ತ್ರಿವುಡೆ**

ಇಂತೆನುತಲಬ್ಧಿಪಗೆ ವಾಣೀ |
ಕಾಂತ ಸೂಚಿಸಿ ತೆರಳೆ ನಿಜ ನಗ |
ರಾಂತರಕೆ ಬಳಿಕಿತ್ತ ವರುಣನು | ಸಂತಸದೊಳು || 134 ||
ಶಶಿವದನೆಸಹಿತರ್ತಿಯಿಂದಲಿ |
ಶಿಶುವ ಪಾಲಿಸೆ ಶುಕ್ಲಪಕ್ಷದ |
ಶಶಿಯ ತೆರದಲಿ ಬೆಳೆವುತಿರ್ದನು | ಕುಶಲದಿಂದ || 135 ||
ಇರಲು ಪ್ರಾಯಸಮರ್ಥನಾಗಿಯೆ |
ಧರಣಿಪರ ಕೈಯಿಂದ ಕಪ್ಪವ |
ತರಿಸಿಕೊಳ್ಳುತ ಮೆರೆವನೆಂಬುದ | ನರಿತು ಖಳರು || 136 ||
ಕೇಳಿ ಹರುಷದಿ ಕುಂಭಕೇತ ಕ |
ರಾಳದೈತ್ಯರು ಕೂಡಿಕೊಂಡು ಸು |
ರಾಳಿಯನು ಬೇರ್ಕಡಿಯೆ ಯೋಚಿಸಿ | ಲೀಲೆಯಿಂದ || 137 ||

**ವಾರ್ಧಕ**

ಕೇಳಿರೈ ತಾಪಸರು ಕಾಶ್ಯಪಕುಲೋದ್ಭವ ಸು |
ಶೀಲ ಧನ್ವಕ ಮುನಿಪರಂಪರೆಯೊಳಾದ ಶ್ರುತು |
ಗಾಲನಿಂದುದಿಸಿದಾ ಶರಭಂಗನಿಂ ಜನಿಸಿ ವರ ಕಾಲನೇಮಿಯೆನಿಪ ||
ಖೂಳನತಿಬಲ ಶೋಣಿತಾಪುರದೊಳಿರಲವಗೆ |
ಬಾಲೆಯೋರ್ವಳು ವೃಂದೆಯೆಂಬಾಕೆ ಜನಿಸಲಾ |
ಲೋಲಲೋಚನೆಯ ಪರಿಪಾಲಿಸುತ ಸಂತಸದೊಳಿರುತಿರಲ್ಕಾ ಸಮಯದಿ || 138 ||

**ಭಾಮಿನಿ**

ಸುರವಿರೋಧಿಗಳಾದ ರಕ್ಕಸ |
ದುರುಳ ದುಷ್ಟರನೇಕಮಂದಿಯ |
ನೆರಹುತತಿಬಲ ಕುಂಭಕೇತನು ಅರುಹಿದನು ಮುದದಿ ||
ಧುರವನಸುರಾಮರರೊಳಗೆ ಗಂ |
ಟಿರಿಸುವೆನು ತಾನೆನುತ ಯೋಚಿಸಿ |
ತ್ವರದಿ ಬಂದನು ಕಾಲನೇಮಿಯ ಬಳಿಗೆ ಬಳಿಕೆಂದ || 139 ||

**ಸುರುಟಿ - ಏಕ**

ಕೇಳು ಕಾಲನೇಮಿ | ದಿತಿಕುಲ |
ಜಾಲ ಸದಾಪ್ರೇಮಿ ||
ಪೇಳುವೆನೊಂದಿಳೆ | ಯೋಳ್ ಪೊಸ ವಾರ್ತೆಯ |
ಕೇಳ್ವುದು ಖಳಕುಲ | ದೇಳಿಗೆ ಯೋಚನೆ || 140 ||
ಸುಂದರ ಬಾಲಕನು | ಕಡಲೊಳು |
ಬಂದುದನ್ನು ತಾನು ||
ತಂದು ಮನೆಗೆಯತಿ | ಚಂದದಿ ಸಲಹುತ |
ನಂದದಿಂದಿಹನಾ | ಸಿಂಧುದಿಕ್ಪಾಲಕ || 141 ||
ವರ ಜಲಂಧರನೆನುತ | ನಾಮವು |
ತರಳಗೆ ಅಬುಜಸುತ ||
ಸುರ ನರ ಉರಗರಿಂ | ಮರಣವಿಲ್ಲೆನುತಲಿ |
ಪರಸಿ ವರವನಿ | ತ್ತಿರುವೀ ವಾರ್ತೆಯ || 142 ||
ಭೀಮವಿಕ್ರಮನವನು | ರೂಪಿಲಿ |
ಕಾಮನಿಗೆಣೆಯಹನು ||
ನೀ ಮಗಳಿತ್ತರೆ ಸಾಮವ ಬೆಳೆಸಿ ಸು |
ತ್ರಾಮನ ಗೆಲಿದತಿ | ಪ್ರೇಮದೊಳೀರ್ಪನು || 143 ||

**ಭಾಮಿನಿ**

ಪೇಳಲೀಪರಿ ಕಾಲನೇಮಿಯು |
ಬಾಳ ಹರುಷಿತನಾಗಿ ನೀವಾ |
ಬಾಲಕನ ಕರೆತನ್ನಿರಣುಗೆಯನೀವೆ ನಾನೆಂದ ||
ಕೇಳಿದಾಕ್ಷಣ ಕುಂಭಕೇತನು |
ಕಾಳತನು ಮರೆಮಾಡಿ ವರುಣನ |
ಆಲಯಕೆ ನಡೆತಂದ ಸುಂದರಕಾಯವನು ಧರಿಸಿ || 144 ||

**ವಾರ್ಧಕ**

ಯೋಗಿಗಳು ಕೇಳಿರೈ ಖಳ ಜಲಂಧರನೆಡೆಗೆ |
ಪೋಗಿ ಕಡು ಸ್ನೇಹಮಂ ಬೆಳೆಸುತ್ತಲಿರ್ದವನ |
ಆಗಮವನರಿತು ಸ್ಮರ ಕೂರ್ಗಣೆಗಳನು ಮುದದಿ ಪ್ರೇರಿಸುವ ಯತ್ನಗಳನು ||
ಸಾಗರಾಧಿಪಗರಿಯದಂತೆಸಗುತಿರುವಾಗ |
ಲಾ ಗರುವಿ ಮನದೊಳಾರೋಗಿಸುವ ತೆರದೊಳುಪ |
ಯೋಗ ಕುಹಕಂಗಳಂ ಬೇಟಗಳ ವೈನದಿಂ ನೂತನದಿ ಮಾತಾಡುತ || 145 ||

**ಕೇದಾರಗೌಳ - ಝಂಪೆ**

ಮಗನೆ ನೀ ಕೇಳು ಮುದದಿ | ಪ್ರಾಯವಿದು |
ನೆಗೆದಾಡುತಿಹ ಸಮಯದಿ |
ಸುಗುಣೆಯರ ವರಿಸಬೇಕು | ಕೀರ್ತಿಯನು |
ಜಗದೊಳಗೆ ಮೆರೆಸಬೇಕು || 146 ||

ಸುಮ್ಮನಿರಬಹುದೆ ಹೀಗೆ | ಮನೆಯೊಳಗೆ |
ಗುಮ್ಮನೆಂದೆನರೆ ನಿನಗೆ ||
ಒಮ್ಮೆ ದಿಗ್ವಿಜಯ ಗೆಯ್ದು | ಬರುವ ನಡೆ |
ಸುಮ್ಮಾನದಿಂದ ಗೆಲಿದು || 147 ||
ವರ ಕಾಲನೇಮಿಯಣುಗೆ | ಇಹಳೋರ್ವಳ್ |
ಸುರ ನರೋರಗರ್ಗಳೊಳಗೆ ||
ಸರಿಯಿಲ್ಲ ಸಟೆಯಿದಲ್ಲ | ಕಂಡರಿವೆ |
ಸರಿಜೋಡಿಯೆನುವರೆಲ್ಲ || 148 ||
ಮನ್ಮಥನ ಕುದುರೆಯಂತೆ | ತೋರುವಳು |
ಉನ್ಮತದಿ ಮದದಿ ಕಾಂತೆ ||
ಸನ್ಮತದಿ ನೋಡು ತಿಳಿದು | ವರಿಸಿದರೆ |
ಮನ್ಮನೋರಥಗಳಹುದು || 149 ||
ಇನ್ನೇತಕವಕಾಶವು | ಬೇಗೇಳು |
ಕನ್ಯೆಯಳ ಕರಸ್ಪರ್ಶವು ||
ಪುಣ್ಯವಿಲ್ಲದೆ ದೊರಕದು | ಲೋಕಾಗ್ರ |
ಗಣ್ಯನಾಗಿಪ ತೆರಕದು || 150 ||
ಎಂದ ಮಾತದು ಸೇರುತ | ಮಣಿಖಚಿತ |
ಸ್ಯಂದನವ ತರಿಸ್ಯೇರುತ ||
ಬಂದು ಶೋಣಿತಪುರದಲಿ | ಕೆಳಗಿಳಿದ |
ವೃಂದೆಯಳ ಪಿತನೆದುರಲಿ || 151 ||
ಬಂದುದನು ಖಳ ಕೇಳುತ | ಕರೆದೊಯ್ದು |
ಮಂದಿರದೊಳುಪಚರಿಸುತ ||
ವೃಂದೆಯನು ಕಾಣಿಸುತಲಿ | ಮನವೊಪ್ಪೆ |
ಮುಂದೆ ಪೇಳ್ದನು ಅವನಲಿ || 152 ||
ನಾಳೆ ಧನುರ್ಲಗ್ನದೊಳಗೆ | ಧಾರೆಯನು |
ಲೀಲೆಯಿಂ ಮಾಳ್ಪೆ ನಿನಗೆ |
ವ್ಯಾಳವೇಣಿಯನೆನುತಲಿ | ಪುರವನುಂ |
ಬಾಳ ಸಿಂಗರಿಸುತ್ತಲಿ || 153 ||

**ವಾರ್ಧಕ**

ಗುರುಮತದಿ ವೇದೋಕ್ತದಿಂದ ಸುಮುಹೂರ್ತದಲಿ |
ದುರುಳರೆಲ್ಲರ ಕರೆಸಿ ವೃಂದೆಯ ಜಲಂಧರಗೆ |
ಕರವಿಡಿಸಿ ಲಗ್ನಮಂ ನಿಖಿಳ ವೈಭವದಿಂದ ನೆರವೇರಿಸಿದನು ಬಳಿಕ ||
ಮೆರೆದಿರುವ ವಾರ್ತೆಯಂ ಕೇಳ್ದಿತ್ತ ಶಂಖ ಶಂ |
ಬರ ರಾಹು ಕೇತು ಸಾಲ್ವಾದ್ಯಖಿಳ ದೈತೇಯ |
ಪರಿವಾರ ನಡೆತಂದು ಕಾಣಿಸಿಕೊಳಲ್ಕವರ ಮನ್ನಿಸುತಲಿಂತೆಂದನು || 154 ||

**ಸಾಂಗತ್ಯ - ರೂಪಕ**

ಬನ್ನಿರೈ ಕುಣಪಭೋಜ್ಯರು ಶೌರ್ಯಗುಣದಿ ಸಂ |
ಪನ್ನ ಬಲಾಢ್ಯರೆಂದೆನುತ ||
ಮನ್ನಿಸುತಲೆ ರಾಹು ಕೇತುದ್ವಯರ ಕಾಯ |
ಭಿನ್ನವಾಗಿಹುದ ಕಂಡೆಂದ || 155 ||
ತನುವಿದೆ ಶಿರವಿಲ್ಲ ಶಿರವಿದೆ ತನುವಿಲ್ಲ |
ಘನ ಮಹಿಮಂಗೆ ಭಂಗವನು ||
ಜನನಸ್ವಭಾವವೊ ಕೊನೆಗಾರು ಗೆಯ್ದುದೊ |
ತನಗೆನ್ನಿರೆನಲುಸುರಿದರು || 156 ||

ಪೂರ್ವಾಮರಾಧಿಪ ಲಾಲಿಸಿ ಕೇಳಯ್ಯ |
ಪೂರ್ವ ವೃತ್ತಾಂತಗಳೆಲ್ಲ ||
ಊರ್ವಿಯೊಳೀವರೆಗೀಪರಿ ನಮ್ಮನು |
ಓರ್ವರು ಕೇಳಿದುದಿಲ್ಲ || 157 ||
ಇಂತೆಮ್ಮ ನೀ ಕೇಳ್ದ ಬಳಿಕ ನಿನ್ನೊಡನೆ ವೃ |
ತ್ತಾಂತಗಳನು ಪೇಳ್ವೆವೆಲ್ಲ ||
ಪಿಂತೆಮ್ಮ ಪಿತನು ಸ್ವರ್ಭಾನು ಪುಟ್ಟುವ ವೇಳೆ |
ಗಿಂತೆರಡಾಗಿರಲಿಲ್ಲ || 158 ||
ಮತ್ತೆ ಕ್ಷೀರಾಬ್ಧಿಯ ಮಥನದಿ ಶ್ರೀಹರಿ |
ಕತ್ತರಿಸಿದನದೊ ಕೊರಳ ||
ಮತ್ತೆರಡಾದುದ್ಯೆ ರಾಹು ಕೇತುಗಳೆಂಬ |
ಉತ್ತಮ ನಾಮಧೇಯಗಳು || 159 ||
ಈತನೆ ಶಂಖ ಶಂಬರನತಿ ಬಲನೀತ |
ಖ್ಯಾತ ನಿಕುಂಭನೆಂಬವನು ||
ಆತನೆ ಬಲಿ ಸುರವ್ರಾತವ ಗೆಲಿದತಿ |
ಖ್ಯಾತ ಪ್ರತುಳಬಲಗೆಂದ || 160 ||

**ಭಾಮಿನಿ**

ಬಲ್ಲಿದವರ್‍ಯೆ ನೀವಸುರ ಸುರ |
ರೆಲ್ಲ ಶರಧಿಯ ಮಥಿಸಲೇತಕೆ |
ಫುಲ್ಲಲೋಚನ ನಿಮ್ಮ ಗಂಟಲ ಕೊಯ್ದ ತಾನೇಕೆ ||
ಎಲ್ಲವನು ನೀವೆನಗೆ ಮಾಜದೆ |
ಸೊಲ್ಲಿಸಲುಬೇಕೆಂದು ತವಕಿಸೆ |
ನಿಲ್ಲದುಸಿರಿದರಾಗಲಾ ರಣಮಲ್ಲರುಗಳೊಲಿದು || 161 ||

**ಮಧುಮಾಧವಿ - ಏಕ**

ಲಾಲಿಸ್ಯೆ ಶರಧಿಸಂಜಾತನೆ ಮುದದಿ |
ಹಾಲುಗಡಲ ಕಡೆದಿಹುದ ಸಂತಸದಿ || ಪ ||
ಮುನಿಪ ದೂರ್ವಾಸನು ದೇವೆಂದ್ರಗೊಲಿದು |
ಘನ ಮಾಲಿಕೆಯ ಕೊಡೆ ಅಮರೇಂದ್ರ ತೆಗೆದು ||
ಮನದಿ ಗರ್ವಿಸಿ ಐರಾವತಕಿಡಲದನು |
ಕ್ಷಣದಿ ಕೋಪಿಸಿ ದುರ್ವಾಸನು ಶಪಿಸಿದನು || 162 ||
ಯೋಗಿಯ ವರದೊಳಷ್ಟೈಶ್ವರ್ಯಗಳನು |
ಸಾಗರಮಧ್ಯದೊಳಡಗಿರಲದನು ||
ಆಗ ನಮ್ಮವರಮರಾವತಿಯಾಳಿ |
ಯೋಗಾವಿಷ್ಟಪರಾಗಿಯಿರಲು ಸುರಾಳಿ || 163 ||
ಬಂದೊರೆಯಲು ಹರಿ ಹರ ಬ್ರಹ್ಮಸಹಿತ |
ಒಂದಾಗಿ ಸರ್ವರು ಶರಧಿಗಯ್ತರುತ ||
ಮಂದರಾದ್ರಿಗೆ ವಾಸುಕಿಯ ಸುತ್ತಿ ನಿನ್ನ |
ತಂದೆಯೆದೆಯೊಳಿಟ್ಟು ಕಡೆದರು ಮುನ್ನ || 164 ||
ಬಂದ ವಸ್ತುಗಳೆಲ್ಲ ಸುರರು ಬಚ್ಚಿಟ್ಟು |
ಒಂದು ಪಂಕ್ತಿಯೊಳಮೃತವನು ತಾ ಕೊಟ್ಟು ||
ಮಂದಿ ಘೋಷದಿ ನಾನು ಸವಿಯಲೊಂದಿಷ್ಟು |
ಅಂದು ಸೂಚಿಸೆ ರವಿ ಹರಿ ಚಕ್ರ ಬಿಟ್ಟು || 165 ||
ಕಡಿಯಲೀ ದೇಹ ವಂದೆರಡಾದುದಂದು |
ಬಿಡುಗಣ್ಣರೆಲ್ಲರಮರರಾದರಂದು ||
ಹೊಡೆದಾಟದಲಿ ದಿತಿಕುಲಜರ ಕೊಂದು |
ಕಡೆಗುಳಿದವರೋಡಿ ಬದುಕಿದರಿಂದು || 166 ||

ಸುರಪುರಕೆಮ್ಮನು ನಮ್ಮರಮನೆಯ |
ಸುರರೆಲ್ಲ ಸೂರೆಗೊಂಡಿಹರೆಂಬ ಪರಿಯ ||
ವರ ಜಲಂಧರ ಕೇಳಿ ಕಿಡಿಕಿಡಿಗೊಂಡು |
ಒರೆದನು ರಾಹುಕೇತುಗಳೊಳ್ ಮುಂಗೊಂಡು || 167 ||

**ಆರ್ಯಾ ಸವಾಯಿ - ಏಕ**

ಅನಿಮಿಷರೊಡೆಯನೊಳ್ ಅನುದಿನ ಕಲಹವಿ |
ದನುಚಿತವೇನ್ ಕಾರಣವು ||
ಸನುಮತವೇ ಸುರರೊಳು ಸೆಣಸಾಟವು |
ಎನಲೆಂದರು ಜಲಂಧರಗೆ || 168 ||

**ನಾದನಾಮಕ್ರಿಯೆ - ಆದಿ**

ಕೇಳಯ್ಯ ಖಳಕುಲಪಾಲಕ | ನಾ |
ಪೇಳುವೆ ವರುಣನ ಬಾಲಕ ||
ಮೂಲವ ಗ್ರಹಿಸು ಕಾಶ್ಯಪನೊಳು | ಸಹ |
ಮೇಳದೊಳಿಹ ರಾಣಿಯರೊಳು || 169 ||
ಹಿರಿಯಾಕೆ ದಿತಿದೇವಿಯೆಮ್ಮವ್ವೆ | ಕೇಳು |
ಕಿರಿಯವಳದಿತಿಯಾ ಸುರರವ್ವೆ ||
ಹಿರಿತನದಲಿ ಸುರಪುರಕೀಗ | ಬಾಧ್ಯ |
ರಿರೆ ನಾವು ಸುರರಾಳುತಿಹರಲ್ಲ || 170 ||
ದಾಯಾದ್ಯ ವ್ಯವಹಾರವಲ್ಲದೆ | ಸುರ |
ರಾಯನೊಳ್ ಹಗೆ ನಮಗಲ್ಲದೆ ||
ನ್ಯಾಯ ಅನ್ಯಾಯಗಳಿದರೊಳು | ಅ |
ನ್ಯಾಯವಾರಿಂದೆಂಬುದ ಕೇಳು || 171 ||
ಇಂತೆನೆ ಮನದೊಳು ಗ್ರಹಿಸುತ | ಶಚಿ |
ಕಾಂತನ ಮೇಲ್ ಮನ ಮುರಿಯುತ್ತ ||
ಚಿಂತೆ ಬೇಡೆಂದಭಯವನಿತ್ತಾ | ಖತಿ |
ಯಾಂತು ಭಾಪೆಂದನು ಖಳ ಮತ್ತಾ || 172 ||

**ದ್ವಿಪದಿ**

ಲೇಸಾದುದೈ ಪೂರ್ವದೇವರುಗಳಿತ್ತ |
ಬೇಸರದೆ ಮನದಿ ಲಾಲಿಸಿರೆನ್ನ ಮಾತ || 173 ||
ಈಸು ದಿನ ಸುರರು ಸತ್ಪಾತ್ರರೆಂದೆನುತ |
ದೋಷಕಂಜುತ ಭಕ್ತಿಯಿಂದಲಿರಲಿತ್ತ || 174 ||
ಈ ತೆರದಿ ಮೋಸದೊಳು ದಿತಿಜರನ್ವಯವ |
ಘಾತಿಸಿದ ಬಳಿಕಮರಕುಲದ ಬೇರ್ ಕಡಿವ || 175 ||
ಪಾತಕವು ಎಳ್ಳನಿತು ಬಾರದೆಮಗೆನುತ |
ಭೂತಳವು ಬಾಯ್ಬಿಡುವ ತೆರದಿ ಗರ್ಜಿಸುತ || 176 ||
ನಡೆಯಲಮರಾವತಿಗೆ ಸೇನೆಯೆಂದವನು |
ತಡೆಯದಸುರರ ಪಡೆಗೆ ಇತ್ತು ನೇಮವನು || 177 ||
ಬಡಿಯೆ ತಮ್ಮಟೆ ಭೇರಿ ವಾದ್ಯ ಕಹಳೆಗಳು |
ಜಡಿಯಲಭುಕೆ ವೀರಭಟರ ಬೊಬ್ಬೆಗಳು || 178 ||
ಇನಿತಾಗುತಿರಲಿದೇನೆನುತ ಚೋದ್ಯದೊಳು |
ದಿನಪನಿದಿರೆಸೆದರೈ ಧೂಮಕೇತುಗಳು || 179 ||
ತಾನೆ ಧರೆಗುರುಳಿದವು ಸುರ ವಿಮಾನಗಳು |
ಸಾನುರಾಗದೊಳೊಲಿದು ಕೇಳಿ ಮೌನಿಗಳು || 180 ||

**ಮಾರವಿ - ಏಕ**

ಇಂತಾನಂದದಿ ಖಳರಯ್ಯುಹ ಸಮ |
ಯಾಂತರದಲಿ ತಿಳಿದು ||
ತಾಂ ತಳುವದೆ ಸುರಮುನಿಪತಿ ಲಕ್ಷ್ಮೀ |
ಕಾಂತನ ನೆನೆನೆನೆದು || 181 ||
ವೀಣಾಗಾನದಿ ಬರೆ ದೂರದೊಳಾ |
ಕೌಣ ಪರೀಕ್ಷಿಸುತ ||
ಮಾಣದೆ ಸರ್ವರು ನಡೆತಂದಿದಿರೊಳು |
ಕಾಣಿಸಿ ಕರೆತರುತ || 182 ||
ವ್ಯಾಘ್ರಾಸನದೊಳು ಕುಳ್ಳಿರಿಸುತ ಚರ |
ಣಾಗ್ರ ಪೂಜೆ ರಚಿಸಿ ||
ಶೀಘ್ರದೊಳಾ ಋಷಿವರಗೆರಗಿದರು ಸ |
ಮಗ್ರರು ಸಂಸ್ತುತಿಸಿ || 183 ||
ನಿಂದಿರಲೆಲ್ಲರ ಕಾಣುತಲಾಗ ಜ |
ಲಂಧರನನು ಕುರಿತು ||
ಚಂದದಿ ಪೂರ್ಣೋಲ್ಲಾಸದೊಳವಗಿಂ |
ತೆಂದನು ಅನುವರಿತು || 184 ||

**ಕೇದಾರಗೌಳ - ಅಷ್ಟ**

ಭಳಿರೆ ಮೆಚ್ಚಿದೆ ನಿನ್ನ ಭಕ್ತಿಗೆ ಶಹಭಾಸು |
ಬಲು ಸಹಸ್ರಹುದು ನೀನು ||
ಇಳೆಯೊಳು ನಿನ್ನ ಸಂಪತ್ತಿಗೆ ಸರಿಗಾಣೆ |
ಖಳಕುಲಾಗ್ರಣಿಯೆ ಕೇಳು || 185 ||
ಏನಿದಾಶ್ಚರ್ಯವೈ ವಿಪರೀತ ನಿನ್ನಯ |
ತಾಣದೊಳಸುರೇಂದ್ರರು ||
ಕಾಣುತಿಹರು ಬಂದ ಕಾರಣವೇನೆಂದು |
ನಾನರಿಯೆನು ಎಂದನು || 186 ||
ಯತಿರಾಯ ಲಾಲಿಸು ದಿತಿಯ ಮಕ್ಕಳನೆಲ್ಲ |
ಹತಿಸಿದ ಸುರನಾಥನು ||
ಅತಿಗರ್ವದಿಂದಮರಾವತಿಯಾಳ್ವುದು |
ಹಿತವೆ ಪೇಳೆನಗೆಂದನು || 187 ||
ಮರುಳಾಗಬೇಡವೀ ದುರುಳರ ಮಾತಿಗೆ |
ತರಳತನದಲಿ ನೀನು ||
ತರವಲ್ಲವಿದು ನೋಡು ಇವರಿದ್ದ ಮನೆಗಳ |
ಬರಿಗೆಯ್ವದುಳಿಯರಿನ್ನು || 188 ||
ತಂಟೆಕೋರರು ರಾಹು ಕೇತುಗಳ್ ಖಳಕುಳ |
ಕಂಟಕರವರೀರ್ವರು ||
ಉಂಟೆ ಇಲ್ಲದ ಚಾಡಿಯೊರೆದಮರರೊಳ್ ಧುರ |
ಗಂಟಿಕ್ಕಿ ಕೊಲಿಸುವರು || 189 ||
ಬರಿಗುಲ್ಲು ನಿದ್ರೆಗೇಡೆಂಬ ಗಾದೆಯು ನಿನ್ನೊ |
ಳಿರುವ ಯೋಚನೆ ನೋಡಲು ||
ನರಿಯೊರಲಿದರಿಂದು ಧರೆಗುರುಳುವುದೇನೈ |
ಬರಿ ಬಯಲಾಸೆಯಿದು || 190 ||
ಬಲಿ ವೈರೋಚನಿ ಹಿರಣ್ಯಕ ಮುಖ್ಯರಿಂದತಿ |
ಬಲನೆ ನೀ ಮರುಳೆ ಪಿಂತೆ ||
ತಿಳಿದು ನೋಡೈ ನಾಕನಿಳಯವಾಳಿದರುಂಟೆ |
ಚಲ ಬೇಡೆಂದೆನಲೆಂದನು || 191 ||

**ಭಾಮಿನಿ**
ಲಕ್ಷ್ಯವೇ ಸುರರೆನಗೆ ಸಮರದಿ |
ಈಕ್ಷಿಸಲು ಸುರಮುನಿ ಮಹಾತ್ಮರು |
ಪಕ್ಷಪಾತಗಳಾಡಬಹುದೇ ಋಷಿಗಳನುಮತಿಗೆ ||
ಶಿಕ್ಷಿಸುವೆನನಿಮಿಷರ ನಂಬಿದ |
ಪಕ್ಷವನು ಬಿಡೆನೆಂಬಚಲ ಪದ |
ದೀಕ್ಷೆಯನು ಕೈಗೊಂಡೆ ನಾನೆನಲೆಂದ ಯತಿವರ್ಯ || 192 ||

**ಶಂಕರಾಭರಣ - ಏಕ**
ಕಂಡು ಮಾತನಾಡಿದರೆ |
ಕೆಂಡದಂತೆ ಕೋಪವೆಂದು |
ಕಂಡುಬಂತೀ ಲೋಕದೊಳಗೆ | ಖಂಡಿತವಾಗಿ ||
ಪುಂಡುಗಾರರೊಡನೆ ಕೂಡಿ |
ಕೊಂಡೆಯದ ಮಾತ ಕೇಳಿ |
ಕೊಂಡು ಕೆಡಬೇಡಕಟ ಜಗದಿ | ಭಂಡನೆಂಬರು || 193 ||
ತುಚ್ಛತನದ ಮಾತನೆಲ್ಲ |
ನೆಚ್ಚಿಕೊಂಡು ಹೋಗಬೇಡ |
ಹೆಚ್ಚಿನಾತ ಸುರಪನೆನ್ನ | ನಿಶ್ಚಯದಲ್ಲಿ ||
ಬೆಚ್ಚುವವನಲ್ಲವೆಂಬ |
ಎಚ್ಚರವ ಪೇಳ್ವೆನೀಗ |
ಇಚ್ಛೆಗಾಡುವನೆಂಬರು | ಮುಚ್ಚು ಮರೆಯೇಕೆ || 194 ||
ದನುಜಾಧೀಶ ಲಾಲಿಸೆನ್ನ |
ಮನಕೆ ತೋರ್ದುದೊರೆದೆ ನಿನ್ನ |
ಮನಕೆ ಬಂದಂತೆಸಗು ಕಾರ್ಯ | ದನುಮಾನವೇನು ||
ಎನುತ ರಾಮನಾಮವನ್ನು |
ಮನದಿ ನೆನೆವುತೆದ್ದನಲ್ಲಿಂ |
ದನಿತರೊಳಗೆ ನಗುತ ದೇವ | ಮುನಿಪನಾಕ್ಷಣ || 195 ||

**ವಾರ್ಧಕ**
ಎಲೆ ತಪೋನಿಧಿಗಳಿರ ಕೇಳಿರೈ ನಾರದನ |
ಸಲೆ ವಚೋಮೃತವ ಕೊಳದತಿ ಗರ್ವದಲಿ ದನುಜ |
ದಳಸಹಿತ ವಹಿಲದಲಿಯಮರಾವತಿಗೆ ಪೊರಟ ಬಳಿಕಿತ್ತ ಸುರಮುನಿಪನು ||
ಸಲಹೋ ಸ್ವಯಂಪ್ರಭಾಕರ ಮಹಾವಿಷ್ಣು ವಟ |
ದೆಲೆಶಾಯಿ ಸುಮುಕುಂದ ಹೇ ತ್ರಿವಿಕ್ರಮ ಕೃಷ್ಣ |
ಸುಲಲಿತೋತ್ತಮ ಸೂತ್ರಧಾರಿಯೆಂದೆನುತಾಗ ವೈಕುಂಠಮಂ ಸಾರ್ದನು || 196 ||

**ಭಾಮಿನಿ**
ಸಂತಸದಿ ವೀಣೆಯೊಳೆ ಲಕ್ಷ್ಮೀ |
ಕಾಂತನನುಪಮ ದಿವ್ಯನಾಮವ |
ನಂತರಂಗದಿ ಪಾಡಿ ಪೊಗಳುತ ಬರುತಿರಲು ಕಂಡು ||
ಚಿಂತೆವಿರಹಿತನೆದ್ದು ಧಿಮ್ಮನ |
ನಂತಶಯನನು ಬಂದು ವಾಣೀ |
ಕಾಂತನಣುಗನ ಕರವ ಪಿಡಿದಿಂತೆಂದ ನಸುನಗುತ || 197 ||

**ಕೇದಾರಗೌಳ - ಅಷ್ಟ**
ಅಪರೂಪ ದರ್ಶನವೇನಿದು ಚೋದ್ಯವು |
ತಪಸಿ ಬಾರೆಂದೆನುತ ||
ಕೃಪೆಯಿಂದಾಸನವೇರಿಸುತಲತಿಯರ್ತಿಯೊಳ್ |
ಉಪಚರಿಸುತಲೆಂದನು || 198 ||

ಗಮನವೆಲ್ಲಿಂದಿಲ್ಲಿಗಾಯ್ತೀಗ ಲೋಕದಾ |
ಗಮವೇನು ಪೊಸತಿಹುದು ||
ಸುಮಶರಪಿತ ಪೇಳೆಂದೆನಲದ ಕೇಳುತ |
ಸುಮನಸಮುನಿ ಪೇಳಿದ || 199 ||

**ಮಧುಮಾಧವಿ - ಆದಿ**

ಲಕ್ಷ್ಮೀಶ ಕೇಳ್ ತವ ಚರಣಾಬ್ಜಗಳನು |
ಈಕ್ಷಿಪಾಪೇಕ್ಷೆಯಿಂದಯ್ತಂದೆ ನಾನು ||
ಈ ಕ್ಷಿತಿಯೊಳಗೊರ್ವ ಖಳ ಜಲಂಧರನು |
ರಾಕ್ಷಸರ್ಗಳನೆಲ್ಲ ನೆರಹಿ ಕೊಂಡವನು || 200 ||
ವರ ರಾಹು ಕೇತುಗಳ್ ಮತವ ಕೈಗೊಂಡು |
ಧರೆಯೆಲ್ಲವನು ಸ್ವಾಧೀನವ ಮಾಡಿಕೊಂಡು ||
ಸುರಲೋಕವಾಳಬೇಕೆಂಬಾಸೆಗೊಂಡು |
ಶರಧಿಘೋಷದೊಳಯ್ದುವುದು ಮಹಾದಂಡು || 201 ||

**ಸೌರಾಷ್ಟ್ರ - ತ್ರಿವುಡೆ**

ಏನಿದೈ ಪೊಸ ವಾರ್ತೆ ಮುನಿಪತಿ |
ನೀನಿದೆಂದುದು ಕೇಳ್ದುದಲ್ಲದೆ |
ನಾನರಿಯೆನವನೆಲ್ಲಿ ಜನಿಸಿದ | ದಾನವೇಶ || 202 ||
ಮುರಮಥನ ಕೇಳಾ ಖಳೇಶನು |
ಶರಧಿಯೊಳು ಜನಿಸಿರ್ದನವ ವರ |
ದುರುಳನವನತಿ ಕಾಲನೇಮಿಯ | ತರಳೆಯವಗೆ || 203 ||
ರಾಣಿ ಗಡ ಮತ್ತವಗೆ ಮುದದೊಳು |
ವಾಣಿಯರಸನ ವರದ ಬಲದಲಿ |
ಕೌಣಪನು ಮೆರೆವುತ್ತಲಿರುವನು | ಕ್ಷೋಣಿಯೊಳಗೆ || 204 ||
ಎಂದರುಹಿ ಮಾರಮಣನಂಘ್ರಿಗೆ |
ವಂದಿಸುತ ನೇಮವನು ಕೊಂಡಾ |
ನಂದದಿಂ ನಡೆತಂದ ನಾಕಕೆ | ಯೆಂದು ವೃತಿಪ || 205 ||

**ಆರ್ಯಾ ಸವಾಯಿ - ಏಕ**

ಹರಿ ಹರಿಯೆಂದಾ ನಾರದಮುನಿಪನು |
ತೆರಳಲು ಲಕ್ಷ್ಮಿಯು ಬಳಿಕಿತ್ತ ||
ಸಿರಿಯರಸನ ಚರಣಾಬ್ಜಕೆ ಮಣಿವುತ |
ಕರ ಮುಗಿಯುತಲೆಂದಳು ನಗುತ || 206 ||

**ಕೇದಾರಗೌಳ - ಅಷ್ಟ**

ಮನುಮಥಜನಕ ನೀ ಲಾಲಿಸೀಗೆನ್ನಯ |
ಮನಸಿನೊಳಿರುವುದನು ||
ಎನುವೆ ನಿನ್ನೊಡನದ ನಡೆಸಿಕೊಡುವೆಯ ನೀ |
ನೆನೆ ಮುದ್ದಿಸುತಲೆಂದನು || 207 ||
ಸುರತಸೌಭಾಗ್ಯಸಂಪನ್ನೆ ಮತ್ಪ್ರಿಯೆ ಕೇಳು |
ಮರಿದುಂಬಿಗುರುಳೆ ನೀನು ||
ಒರೆ ನಿನ್ನ ಮನದಿಷ್ಟವರೆನಿಮಿಷದೊಳದ |
ಕರುಣಿಪೆನೆನೆ ಪೇಳ್ದಳು || 208 ||

ಎನ್ನಿಂದ ಬಳಿಕೋರ್ವ ಜನಿಸಿದ ಪಿತಗೆ ಸಂ |
ಪನ್ನ ಜಲಂಧರನು ||
ಪುಣ್ಯದಿಂದೆನಗರಿಯಿತು ಎನ್ನ ಅನುಜನ |
ಕಣ್ಣಾರೆ ಕಾಣಬೇಡಾ || 209 ||
ಅಹುದೇನೆ ಗುಣಮಣಿ ಜಲದಿ ಪುಟ್ಟಿಹ ಖಳ |
ಸಹಭವನಾದಮೇಲೆ ||
ಬಹುವಿಧ ಜೀವರಾಶಿಗಳಿವೆ ನೀರೊಳು |
ಸಹವುದರರೆ ನಿನಗೆ || 210 ||
ಎಂದಳಿದಂತಲ್ಲವೆನೆ ನಾನಾ ಪರಿಯಿಂ ಮು |
ಕುಂದನೊಡಂಬಡಿಸೆ ||
ಸಿಂಧುನಂದನೆ ಕೇಳದಿರೆ ಮಾಯಾಮಹಿಮ ಮ |
ತ್ತೊಂದ ಬಗೆದ ಬಳಿಕ || 211 ||

**ವಾರ್ಧಕ**

ಅಪ್ರಮೇಯರಿರ ಲಾಲಿಸಿ ಕೇಳಿ ರಮೆಯನುಂ |
ಸುಪ್ರಿಯನೊಡಂಬಡಿಸಲಾರದಿರೆ ಕ್ಷಮೆಯನುಂ |
ಸುಪ್ರಕಾಶನು ತಾನೆ ಮನವೊಲಿಸುತಾಕ್ಷಣಂ ಸಂಚರಿಸಲೆಂದೀರ್ವರು ||
ವಿಪ್ರವೇಷವ ತಾಳಿ ಪೇಳ್ವನೆಲೆ ಕಾಂತೆ ಕೇಳ್ |
ಕ್ಷಿಪ್ರದಿಂ ತೋರ್ಪೆ ನಿನ್ನನುಜನಂ ಬಾರೆನುತ |
ಲೀ ಪ್ರಕಾರದೊಳೀರ್ವರವನಿಗೈತಂದರದನೇವೇಳ್ವೆನಚ್ಚರಿಯನು || 212 ||

**ಭಾಮಿನಿ**

ಪಟ್ಟೆವಡಿ ಧೋತ್ರವನು ನೆರಿ ತೆಗೆ |
ದುಟ್ಟು ಪಣೆಯೊಳು ಗೋಪಿಭಸ್ಮವ |
ನಿಟ್ಟು ಜಪಸರವೆಣಿಸಿ ಕಯ್ಯೊಳು ಶಿವ ಶಿವಾಯೆನುತ ||
ಪಟ್ಟದರಸಿಯು ಸಹಿತ ನಡೆತರೆ |
ದೃಷ್ಟಿಗೋಚರಿಸಲು ಜಲಂಧರ |
ತಟ್ಟನಿದಿರ್ಗೊಂಡೆರಗಿಯುಪಚರಿಸುತ್ತ ನುಡಿಸಿದನು || 213 ||

**ಕಾಂಬೋಧಿ - ಝಂಪೆ**

ಕರುಣಾಳುಗಳೆ ನೀವು | ಪರಿಪೂರ್ಣ ವೃದ್ಧರೈ |
ಸುರರೊ ದಾನವರೊ ಮಾನವರೊ ||
ಪರಮಾರ್ಥ ನೀವಾರು | ಅರುಹಿರದನೆಂದೆನಲು |
ಕರುಣನಿಧಿ ನುಡಿದನುತ್ತರವ || 214 ||
ದನುಜೇಶನವಧರಿಸು | ವನಧಿಯೊಳು ನೀ ಜನಿಸಿ |
ಘನತೆಯಿಂದಿರುವೆಯೆಂಬುದನು ||
ಮುನಿಪ ನಾರದನಿಂದು | ಎನಗೆ ಪೇಳಿದನು ನಿ |
ನ್ನನು ನೋಡಬಂದೆವದರಿಂದ || 215 ||
ಕೇಳ್ದು ಸೋಜಿಗವೆನ್ನ | ಪೇಳ್ ದ್ವಿಜೋತ್ತಮಯೆನ್ನ |
ಮೇಲಿನಿತು ಕರುಣ ನಿಮಗಿಹರೆ ||
ಜಾಲಮಾತೇಕೆ ನೀ | ವೆಲ್ಲಿ ತಾನಾರೆನಲು |
ನೀಲವರ್ಣನು ಬಿತ್ತರಿಸಿದ || 216 ||
ವನಧಿಮಥನದ ವೇಳೆ | ಜನಿಸಿದಳು ರಮೆಯೆಂಬ |
ಘನಪೆಸರ ಹಿರಿಯಾಕೆ ನಿನಗೆ ||
ಎನಗೆ ರಮಣಿಯು ಆದಿ ನಾರಾಯಣಾಖ್ಯ ತಾ |
ನೆನಲೆಂದನಾ ಜಲಂಧರನು || 217 ||

**ಕೇದಾರಗೌಳ - ಅಷ್ಟ**

ಭಳಿರೆ ಶಭಾಸು ಮೆಚ್ಚಿದೆ ನಿನ್ನ ಮಾತಿಗೆ |
ಗಳಹುವೆ ಸತ್ಯವಲ್ಲ ||
ಸುಲಭವೆ ಎನ್ನಗೃಹಿಣಿಯು ವಿಷ್ಣುವೆಂದರೆ |
ತಿಳಿ ಮುದಿ ಹಾರ್ವನಲ್ಲ || 218 ||
ತಿರುಕುಳಿ ನೀವೆಲ್ಲಿ ರಮೆ ನಾರಾಯಣರೆಲ್ಲಿ |
ಜರೆಯಪ್ಪುವುದೆಯವರು ||
ಸರಸಿಜಭವ ಮುಖ್ಯ ಸುರರಿಂದಲಧಿಕರು |
ಪರಮ ಮೂರ್ತಿಗಳವರು || 219 ||
ರವಿಕೋಟಿ ರಶ್ಮಿಪ್ರಕಾಶವುಳ್ಳವರು ಈ |
ಪರಿಯ ಭಿಕ್ಷಾಟನವೆ ||
ದಿವಿಜರ ಸ್ತುತಿಗೆ ಮೈಗಾಣಿಸದಿರುವರು |
ಅವರಿಗೀ ಪರಿಭವವೆ || 220 ||
ಸಾಕು ಸಾಕಾ ಮಾತು ನೀವು ದಂಪತಿಗಳು |
ಯಾಕೆ ಬಂದಿರಿ ಎನ್ನಲ್ಲಿ ||
ಬೇಕಾದ ಬಯಕೆಯ ಬೇಡಿ ಕೊಡುವೆನೆನೆ |
ಆ ಖಳನಿದಿರಿನಲ್ಲಿ || 221 ||

**ಸಾಂಗತ್ಯ - ರೂಪಕ**

ಸ್ಮರಕೋಟಿಲಾವಣ್ಯ ವರ ಸುದರ್ಶನ ಶಂಖ |
ಮೆರೆವ ಕಿರೀಟ ಕುಂಡಲವ ||
ಪರಿಶೋಭಿಸುವ ಭುಜಕೀರ್ತಿ ವೈಜಯಂತಿ |
ಕೊರಳ್ ಹಾರ ಪದಕಾವಳಿಗಳ || 222 ||
ಕರದೊಳು ಕಡೆ ಮುಂಗೈಸರಪಣಿಯೆಸೆಯಲು |
ವರ ಪೀತಾಂಬರದುಡುಗೆಯನು ||
ಸರಪಣಿ ಡಾಬು ನೇವಳ ಸುತ್ತೆಸೆಯೆ ಕಿರು |
ಬೆರಳಲಿ ಹೊನ್ನ ಉಂಗುರವು || 223 ||
ಘಲಿಘಲಿರೆನುವ ಕಾಲ್ಗೆಜ್ಜೆ ಪೈಜಣಿಗಳು |
ಉಲಿಯೆ ವಾಮದಿ ಲಕ್ಷ್ಮಿಸಹಿತ ||
ಥಳಥಳಿಸುವ ಲಕ್ಷ್ಮೀನಾರಾಯಣರ ಮೂರ್ತಿ |
ಖಳ ಕಂಡು ಬೆರಗಾಗುತೆಂದ || 224 ||
ಹರ ಹರ ನೀವ್ ಪರಬ್ರಹ್ಮಸ್ವರೂಪರೆಂ |
ದರಿಯದಾಡಿದ ಕುಂದುಗಳನು ||
ಮರೆದೆನ್ನ ರಕ್ಷಿಸೈ ಹರಿ ಸರ್ವೋತ್ತಮಯೆಂದು |
ಚರಣಕಾನತನಾಗಲೆಂದು || 225 ||

**ಭಾಮಿನಿ**

ಸಾಕು ಸೈರಿಸು ಬೆದರಬೇಡೆನು |
ತಾ ಖಳನ ಮಸ್ತಕವ ನೆಗಹುತ |
ಪಾಕಶಾಸನವಂದ್ಯ ಕರುಣಾಕಟಾಕ್ಷವೀಕ್ಷಣದಿ ||
ಶೋಕ ಬಿಡು ನೀನರಿಯದಾಡಿದ |
ವಾಕು ಮನಸಿಗೆ ತರೆವು ನಾವ್ ದಿಟ |
ವ್ಯಾಕುಲವ ಪಡಬೇಡ ಬೇಕಾದಿಷ್ಟ ಬೇಡೆನಲು || 226 ||

**ಬೇಗಡೆ - ಅಷ್ಟ**

ಒಳ್ಳಿತಾಯ್ತಿನ್ನೇನ ನಾನೆನಲಿ | ಭಾವಯ್ಯ ನೀನೆ |
ಮ್ಮಲ್ಲಿಗಯ್ತಂದಿರುವುದಿಂದಿನಲಿ ||
ಬಲ್ಲಿದನು ನಾನೆನ್ನ ಯೋಗವಿ |
ದೆಲ್ಲ ಪ್ರಕಟಿಸಿತಿನ್ನು ಧರೆಯೊಳು |
ಇಲ್ಲೆನಗೆ ಸರಿ ನಿಮ್ಮ ಕರುಣದಿ || ಪ ||
ಇಂದಿರೆಯನರವಿಂದನಾಭನನು | ಕರವಿಡಿದು ಬಲು ಆ |
ನಂದದಲಿ ಕೈಮುಗಿದು ದಾನವನು ||
ಚಂದದಿಂ ಕರೆದೊಯ್ದು ಗದ್ದುಗೆ |
ಕುಂದದೇರಿಸುತೀರ್ವರನು ನಲ |
ವಿಂದಲಾ ನೀರೇಜಪಾದ |
ದ್ವಂದ್ವವನು ಪೂರ್ಣೇಂದುಮುಖಿ ಸಹ |
ಮುಂದೊದಗಿ ತೊಳೆವುತ್ತ ನವವಿಧ |
ದಿಂದಲರ್ಚಿಸಿ ಪ್ರಾರ್ಥಿಸುತ ಮಗು |
ಳೊಂದಿಸುತ್ತಿಹ ಅಂದವೀಕ್ಷಿಸಿ |
ಎಂದನಾ ಗೋವಿಂದ ಖಳನೊಳು || 227 ||
ಮೆಚ್ಚಿದೆನು ನಾ ಭಕ್ತಿ ಭಾವನೆಗೆ | ನಿಮ್ಮೀರ್ವರಿಗೆ ಮನ |
ದಿಚ್ಛೆಯಾವುದು ಪೇಳಿ ಕ್ಷಣದೊಳಗೆ ||
ಉಚ್ಚರಿಸೆ ತಾನೀವೆನೀಗಲೆ |
ನಿಶ್ಚಯವು ಎಂದೆನಲು ಕೇಳುತ |
ಹೆಚ್ಚಿ ಮನದುಲ್ಲಾಸದಿಂದಲಿ |
ಅಚ್ಯುತನಿಗಿಂತೆನುತ ಪೇಳಿದ |
ಸಚ್ಚಿತರು ನೀವೆನ್ನ ಮನೆಯಲಿ |
ನಿಚ್ಚವಿರಬೇಕೆಂಬುದೆಮ್ಮಯ |
ಇಚ್ಛೆಯಿದೆ ಸಲಿಸೀಗಲೆನ್ನುತ |
ಮಚ್ಚರೂಪನಿಗೆರಗಲೀರ್ವರು || 228 ||

**ಭಾಮಿನಿ**

ಖಳನ ಭಕ್ತಿಗೆ ಮೆಚ್ಚುತಲಿ ಮನ |
ವೊಲಿದು ನಾರಾಯಣನು ಕರುಣದಿ |
ಜಲಧಿಜೆಯು ಸಹಿತಿರ್ದರಾತನ ಮನೆಯೊಳನವರತ ||
ನಳಿನಗರ್ಭಾದ್ಯಖಿಲ ದಿವಿಜಾ |
ವಳಿಯು ಬಂದೋಲೈಸುವರು ದಿತಿ |
ಕುಲಜನೇತರ ಧನ್ಯನೋ ಮುನಿತಿಲಕರಿದ ಕೇಳಿ || 229 ||

**ಕಂದ**

ಇಂದಿರೆಸಹಿತಾ ಹರಿ ತ |
ನ್ನಂದಿರದೊಳಗಿಹನೆನೆ ಗರ್ವದಿಯಿರಲವನುಂ ||
ಒಂದಿನ ಸ್ವರಕಯ್ದುವೆನೆನು |
ತಂದತಿ ಹರುಷದೊಳ್ ವೃಂದೆಯ ಕರೆದಿಂತೆಂದಂ || 230 ||

**ಸುರುಟಿ - ಏಕ**

ಅರಸಿಯೆ ಕೇಳಿದೆಯ | ನಿನ್ನೊಡ |
ನೊರೆವೆನೆನ್ನಂತರ್ಯ ||
ಸುರನಗರದಿ ಸಿರಿ | ದೊರೆತನ ಸಹಿತಲಿ |
ದುರುಳರಿಗೊಲಿಸಿ ನಾ | ಬರುವೆ ನಾಳ್ವಿಲ್ಲಿಗೆ || 231 ||

ದಿತಿಜರ ಕುಲವೆಲ್ಲ | ಮೋಸದಿ |
ಹತಿಸಿದ ಸುರಪಾಲ ||
ಪ್ರತಿ ಗೆಲಿದಮರಾ | ವತಿಯನು ಸಹ ಸುರ |
ಪತಿಯನು ಬಡೆದತಿ | ಹಿತದಿ ನಾ ಪಾಲಿಪೆ || 232 ||
ಕುಲಜರೆನುತ ಬಂದು | ಪೂರ್ವವ |
ತಿಳಿಸಿದ ಬಳಿಕಿಂದು ||
ಬಲಹೀನರ ಹೆ | ಬ್ಬುಲಿಗಳು ಸಲಹದೆ |
ಸುಲಭವೆ ಬಿಡುವುದು | ತಿಳಿಯೆನಲೆಂದಳು || 233 ||

**ಮಾರವಿ - ಆದಿ**

ಹಿತವಲ್ಲ | ಇದು | ಹಿತವಲ್ಲ || ಪ ||
ಹಿತವಲ್ಲವಿದು ಅಸಂಗತವಾದ ಕಾರ್ಯ |
ಪತಿಯೆ ನೀ ಲಾಲಿಸು ನಾನೆಂಬ ನುಡಿಯ || 234 ||
ಸುರವರನವನು ಸಾಮಾನ್ಯನೆ ಮೊದಲೆ |
ದುರುಳರ ಮಾತಿದು ದಿಟವಲ್ಲ ತೆರಳೆ ||
ಸುರರೊಳು ಕಾದಿ ಜೀವಿಸಿದವರುಂಟೆ |
ಕರವ ಮುಗಿದು ಬೇಡುವೆನು ಬೇಡ ತಂಟೆ || 235 ||
ಬಲಿ ವೈರೋಚನಿ ಹಿರಣ್ಯಕರು ದುರ್ಬಲರೆ |
ಬಳಲಿದಲ್ಲದೆ ವ್ಯೋಮಲೋಕವಾಳಿದರೆ ||
ಖಳರೊಳು ಕೂಡಿ ನೀ ವ್ಯರ್ಥದಿ ಪ್ರಾಣ |
ಕಳಕೊಳ್ಳಬೇಡೆನ್ನ ಮೋಹದ ರಮಣ || 236 ||
ಬಿಡುಗಣ್ಣರತಿಬಲರುಗಳವರಿಂಗೆ |
ಮೃಡನ ಸಹಾಯ ಮತ್ತೆರಡನೆಯವರ್ಗೆ ||
ಕಡಲಶಯನನ ಕೃಪೆಯಿದೆಯಯ್ಯ ಹೆಚ್ಚು |
ಕೆಡಬೇಡ ನಿನಗೆ ಸಾರಿದೆನಿದು ಹುಚ್ಚು || 237 ||
ಇನಿತು ವಿವೇಕದ ನುಡಿಗಳ ತಿಳಿದು |
ವನಿತೆರನ್ನಳೆ ಪೇಳಲದಕೆ ತಾ ಮುಳಿದು ||
ಘನ ಕ್ರೋಧದಿಂದ ಮುಂದಪ್ಪುದರಿಯದೆ |
ದನುಜನಿಂತೆಂದನು ವರ ಪತಿವ್ರತೆಗೆ || 238 ||

**ಭೈರವಿ - ಏಕ**

ಕಾಂತಾಮಣಿ ನೀ ಕೇಳು | ಬಲು |
ಭ್ರಾಂತಿಗಳಾಡದಿರೇಳು ||
ಅಂತಿಹ ಚಲವಿದ ಬಿಡೆನು | ಶಚಿ |
ಕಾಂತನನಲ್ಲಿರಗೊಡೆನು || 239 ||
ರಮೆ ಹರಿಸಹಿತೆಮ್ಮಲ್ಲಿ | ಇರೆ |
ಉಮೆಯರಸನು ಎನ್ನಲ್ಲಿ ||
ಸಮರಕೆ ಬಂದರು ಬೆದರೆ | ಇಕೊ |
ಗಮಕದಿ ಗೆಲುವೆನು ಚದುರೆ || 240 ||
ಪರಮೇಷ್ಠಿಯ ವರ ನನಗೆ | ಇರೆ |
ಸುರವರ ಮುಖ್ಯಾಮರರ್ಗೆ ||
ಸರಿಯೆನು ಸಂಗರದೊಳಗೆ | ಜಯ |
ಬರುವುದು ಇರು ಮನೆಯೊಳಗೆ || 241 ||
ಎಂದಾಕೆಯನೊಡಬಡಿಸಿ | ಸಾ |
ನಂದದಿ ಸೇನೆಯವೆರಸಿ ||
ಕುಂದದೆ ಅಮರಾವತಿಗೆ | ನಡೆ |
ತಂದನು ಪೌರುಷದೊಳಗೆ || 242 ||

**ವಾರ್ಧಕ**
ಸೇನೆ ಬಿಡದನಿಮಿಷರ ಪಟ್ಟಣವ ಮುತ್ತಲಾ |
ದಾನವರ ಗರ್ಜನೆಗೆ ಬೆದರಿ ಕಂಗೆಟ್ಟು ವೈ |
ಮಾನಿಕರು ದಿಗ್ದೆಸೆಗೆ ಓಡಲಾ ಪುರಜನರು ರಣ ಪಲಾಯನ ಗೆಯ್ಯುತ ||
ಪ್ರಾಣಮಾತ್ರವೆಯುಳಿದು ದೇವೆಂದ್ರನೆಡೆ ಸೇರೆ |
ಕೌಣಪನು ತನ್ನವರ ದ್ವಾರಂಗಳಲಿ ನಿಲಿಸಿ |
ಜಾಣರಲ್ಲಿರುವರತಿಬಲರೀರ್ವರಂ ಕರೆದು ವಿನಯದಿಂದಿಂತೆಂದನು || 243 ||

**ಆರ್ಯಾ ಸವಾಯಿ - ಏಕ**
ಇಷ್ಟದಿ ನಮ್ಮೊಳು ಬಾಳಿರುವನೊ ಸುರ |
ಶ್ರೇಷ್ಠನು ಸೆಣಸುವನೋ ಎಂದು ||
ತಟ್ಟನೆ ಕೇಳ್ದೀಗಲೆ ಬಹುದೆನೆ ತ್ರಿ |
ವಿಷ್ಟಪಗೆರಗಿ ಬಿನ್ನಯ್ಸಿದರು || 244 ||

**ಮಾಧವಿ - ಏಕ**
ಸಲಾಮು ಸುರಪಾಲಪ್ಪ ನಿನ್ನಾಗೆ | ಬಲ್ |
ಬಲಾಢ್ಯ ಬಂದಿಹ ನೋಡಪ್ಪ ||
ಕಲಾಗಿಲಾ ಬಿಡ್ ಚಲಾವು ಕೊಳ್ಳದು |
ಸಲಾಮ ಕೊಟ್ಟು ಬದುಕ್ಕೊಳ್ಳೆ || 245 ||
ಉದಧಿಯೊಳು ಪುಟ್ಟಿದನಂತೆ | ಅವ ಸೇ |
ರಿದವರ ಸಲಹುವ ಕಾಣ್ತಾ ||
ಮದಮುಖಿತನವಿರೆ ಗೆಲುವೆನೆನುತ್ತ |
ಒದಗಿಲಿ ಬಂದಿಹರ್ಕೈ ಕಾಣ್ತಾ || 246 ||
ಸೇನೆಸಹಿತ ಕಾದಲಿಕಯ್ತರುವ | ನಿ |
ನ್ನೇನು ಯೋಚನೆ ಮೊದಲೀಗ ||
ದಾನವರರಸಗೆ ಪೇಳಬೇಕೆನೆ ಅನು |
ಮಾನಿಸಿ ಬೆಸಸಿದ ಬದಲಾಗ || 247 ||

**ಭಾಮಿನಿ**
ಅಸುರರವದಿರ ಪೇಳಿ ನಿಮ್ಮಯ |
ಅಸಮಬಲನೊಳು ಸೆಣಸಲೊಲ್ಲದೆ |
ವಶವಹರೆ ಮರುಳಲ್ಲ ಭಾಪೆಂದೆನರೆ ಸುರರೆನಗೆ ||
ಮಸಕದೊಳು ಕೈಚಳಕ ತೋರೆಂ |
ದಸುರಗೆನುವುದೆನುತ್ತ ದೂತರ |
ಬೆಸಸಿ ಕಳುಹಲು ಪೋಗಿ ತಮ್ಮಾಳ್ದಂಗೆ ಕೈ ಮುಗಿದು || 248 ||

**ಕಾಂಬೋಧಿ - ಏಕ**
ಕೇಳು ರಾಕ್ಷಸಪತಿಯೆ ನೀನಿಂದು |
ಪೇಳಿ ಬಂದೆವು ಇಂದ್ರಗಾವಿಂದು || ಪ ||
ನಿನ್ನ ಕಾರ್ಯವ ಮುನ್ನನುಸಿರಲು ನಾವ್ ಸಂ |
ಪನ್ನ ದೇವೇಂದ್ರನು ಕೇಳಿ ಬೇಗ ||
ಉನ್ನತ ಮದಗರ್ವದಿಂದ ಲೆಕ್ಕಿಸೆನೆಂದ |
ಸೈನ್ಯವ ಕೂಡಿಬರಲಿ ಯುದ್ಧಕೆಂದ || 249 ||
ನಿಮ್ಮ ದೊರೆಗೆ ನೀವು ಚೆನ್ನಾಗಿ ಪೇಳ್ವುದು |
ನಮ್ಮ ತಳ್ಳಿಯು ಬೇಡ ಖರೆಯಿದೆಂದು ||
ನಿಮ್ಮಯ ಕೇಳು ರಾಕ್ಷಸಪತಿಯೆ ನೀನಿಂದು |
ಪೇಳಿ ಬಂದೆವು ಇಂದ್ರಗಾವಿಂದು || 250 ||

ನಿನ್ನ ಕಾರ್ಯವ ಮುನ್ನನುಸಿರಲು ನಾವ್ ಸಂ |
ಪನ್ನ ದೇವೇಂದ್ರನು ಕೇಳಿ ಬೇಗ ||
ಉನ್ನತ ಮದಗರ್ವದಿಂದ ಮತವೇನೆಂ |
ದಿನ್ನೊಮ್ಮೆ ಕೇಳಿದಡಾಗ |
ಘಮ್ಮನೆ ನಡೆಯೆಂದ ಸಮರವೆಂದ || 251 ||

**ಕಂದ**
ಇಂದ್ರನ ನುಡಿಯಂ ಸಭೆಯೊಳ್ |
ಒಂದನು ಬಿಡದೊಕ್ಕಣಿಸಲು ಕೇಳ್ದಾ ಕ್ಷಣದೊಳ್ ||
ಸಿಂಧುವಿನಂದದಿ ಭೋರ್ಗರೆ |
ದೆಂದನುಮೋದುತ ಕರೆದಮರರಿಗಸ್ತ್ರವನುಂ || 252 ||

**ಸೌರಾಷ್ಟ್ರ - ತ್ರಿವುಡೆ**
ಬನ್ನಿರೋ ಸುಮನಸರು ಯುದ್ಧಕೆ |
ಬನ್ನಿರೋ ಭುಜಬಲಪ್ರತಾಪರು |
ಬನ್ನಿರೆನುತೊಳವೊಕ್ಕರಾ ಸಂ | ಪನ್ನಪುರವ || 253 ||
ಕರೆಕರೆದು ಬೆನ್ನಟ್ಟುತಸುರರು |
ತರುಬಿ ನಿಲ್ಲಲು ಕಂಡ ದಿವಿಜರು |
ತಿರುಗಿ ಮಾರಾಂತರು ಮಹೋಗ್ರದಿ | ಧುರಕೆ ಬೇಗ || 254 ||
ಪರಶು ಪಟ್ಟಿಸ ಕುಂತ ತೋಮರ |
ಸುರಗಿ ಶಲ್ಯ ಕೃಪಾಣ ಡೊಂಕಣಿ |
ಸುರಗಿ ಪಾಶ ತ್ರಿಶೂಲ ಗದೆಗಳ | ಧರಿಸಿ ಕರದಿ || 255 ||
ಚೂಣಿ ಸಮರದಿ ಉಭಯ ತಳ್ಳಲಿ |
ಪ್ರಾಣದಾಸೆಯ ಬಿಟ್ಟು ಹೆಣಗುತ |
ತ್ರಾಣಗುಂದಲು ಬಿದ್ದುದಾಹವ | ಕ್ಷೋಣಿಯೊಳಗೆ || 256 ||

**ವಾರ್ಧಕ**
ಈ ತೆರದೊಳುಭಯಬಲ ಹೆಣಗುತಂ ಜುಣುಗುತಂ |
ತಾ ತಳುವದೆಚ್ಚಾಡಿ ತೊನರುತಂ ಕೊನರುತಂ |
ಸೋತು ಮೆಯ್ಮರೆವುತಂ ಬೀಳುತಂ ಏಳುತಂ ಕಾತರಿಸಿ ಕಂಗೆಡುತಲಿ ||
ಖಾತಿಗೆಡುತಹಿತರಂ ನೋಡುತಂ ಓಡುತಂ |
ಭೀತಿಯಿಂ ಬೆನ್ನಟ್ಟಿ ಬರುವುದಂ ತಿರುವುದಂ |
ತಾ ತಿಳಿದು ಬಲವೈರಿ ಬೈವುತಂ ಹೊಯ್ವುತಂ ನುಗ್ಗಿದರ ನುಗ್ಗರಿವುತ || 257 ||

**ಭಾಮಿನಿ**
ಮುಂದುವರಿದೆರಗುವರು ರಕ್ಕಸ |
ವೃಂದವನು ಹಿಮ್ಮೆಟ್ಟಿಸುವ ಬಿಡ |
ದೊಂದೆ ನಿಮಿಷದಿ ಸವರಿ ದಶಸಾಹಸ್ರ ಕರ್ಬುರರ ||
ಕೊಂದುದನು ಪರಿಕಿಸಿ ಜಲಂಧರ |
ನೆಂದನೆಲವೋ ಸ್ವರ್ಗದೊಡೆಯನ |
ಬಂದಿಗಾರತ್ವವನು ತನ್ನಲಿ ತೋರೆಲಾಯೆಂದ || 258 ||

**ಶಂಕರಾಭರಣ - ಮಟ್ಟೆ**

ಕಡು ಸಮರ್ಥ ಸುರಪ ನಿನ್ನ |
ಕಡುಹ ಕಂಡೆ ಬರಿದೆಯೆನ್ನ |
ಪಡೆಯನೇಕೆ ಕೊಲುವೆಯೆ | ನ್ನೊಡನೆ ಸೆಣಸದೆ ||
ಕಡೆಯ ಕಾಲ ನಿನ್ನ ಸತ್ತ್ವ |
ನಡೆಯದೈಸೆ ಬಂತೆನುತ್ತ |
ಧಡಿಗನಿಟ್ಟ ಶೂಲವನ್ನು | ತಡೆಯುತೆಂದನು || 259 ||
ಎಲವೊ ಖೂಳ ನಿನ್ನ ಜಂಭ |
ವಿಳೆಯ ನರರ ಗೆಲಿದೆನೆಂಬ |
ಬಲುಹ ತೋರು ಬಂದಡೆನ್ನೊ | ಳುಳಿದು ಪೋಪೆಯ ||
ತಲೆಯ ಕೊಂಬೆನೆಂದದಿತಿಜ |
ಬಲು ಶರಂಗಳಿಡಲು ದನುಜ |
ತಳುವದದರ ಮಾಪುಗೆಯ್ಯೆ | ಕುಲಿಶಧರನೊಳು || 260 ||
ಮುನ್ನ ಗೆಲಿದ ಖಳರ ನಿನ್ನ |
ಬೆನ್ನೊಳುಗಿವೆ ನಡೆಯದಿನ್ನು |
ಪನ್ನತಿಕೆಯೆಂದೆಚ್ಚ ಕಣೆಗ | ಳನ್ನು ಸವರುತ ||
ಮುನ್ನಿನಸುರರಿರ್ಪ ಸ್ಥಳಕೆ |
ನಿನ್ನ ಕಳುಹದಿರೆನು ಜೋಕೆ |
ಯೆನ್ನುತಸ್ತ್ರ ಬಿಡಲು ಗಳಕೆ | ಪುಣ್ಯಜನಪನು || 261 ||
ಕಡುವಿರೋಧದಿಂದ ಕೈಯ |
ಖಡುಗವನ್ನು ಜಡಿದು ತಲೆಯ |
ಕಡಿವೆನೆನುತ ಬರಲು ದೇವ | ರೊಡೆಯ ಕಾಣುತ ||
ಕಡುಬಲಾಢ್ಯನೀತನೊಡನೆ |
ತುಡುಕಲಾರದೆ ಗಡಗಡನೆ |
ನಡುಗಿ ತಸ್ಕರವನು ಒಡನೆ | ಹಿಡಿದನಾಕ್ಷಣ || 262 ||

**ವಾರ್ಧಕ**

ಈ ಖಳನೊಳಾಹವದಿ ಗೆಲುವ ಸುಭಟೋತ್ತಮರ |
ನಾ ಕಾಣೆನೀ ಮೂರು ಲೋಕದೊಳಗೆಂದೆನುತ |
ನಾಕಪಾಲಕ ನಾಕ ತಿಂಥಿಣಿಯನೊಡಗೊಂಡು ರಜತಾದ್ರಿಗಾಗಿ ನಡೆಯೆ ||
ನಾಕಮಂ ಪಾಲಿಸುತಿರೆ ಜಲಂಧರನಾ ಪಿ |
ನಾಕಿಯಂ ಮರೆವೊಕ್ಕುದಾ ಸುರಸ್ತೋಮ ತ್ರೈ |
ಲೋಕ್ಯರಕ್ಷಕ ತ್ರ್ಯಕ್ಷ ರಕ್ಷಿಸೆಂದೆನುತ ಸಹಸ್ರಾಕ್ಷಸಹ ಸಂಸ್ತುತಿಸುತ || 263 ||

**ಭಾಮಿನಿ**

ಪಾಲಿಸೈ ಪುರಹರ ಕಪರ್ದಿಯೆ |
ಪಾಲಿಸೈ ಶಿವಸಾಂಬ ಎಮ್ಮನು |
ಪಾಲಿಸೈ ಸಂಕರ್ಷಣಾರ್ಣವ ಪಾಲಿಸೆಂದೆನುತ ||
ಕಾಲಿಗೆರಗುತ ಪೊರಳ್ವ ನಿರ್ಜರ |
ಜಾಲವನು ಸಂತಯ್ಸಿ ಬೆದರದಿ |
ರೇಳಿ ರಕ್ಷಿಪೆ ಬಂದ ಭಯವೇನೆನಲು ಹರಿ ನುಡಿದ || 264 ||

**ನವರೋಜು - ಆದಿ**

ದಯವಿಟ್ಟಾಲಿಸು ಜೀಯ | ತ್ರಿ |
ನಯನ ಪಾರ್ವತಿಪ್ರಿಯ ||
ಭಯರಹಿತನೆ ನಿ | ನ್ನಯ ಕರುಣದಿ ಪದ |
ವಿಯ ಪಾಲಿಸಿ ನಿ | ರ್ಭಯದೊಳಗಿರ್ದೆವು || 265 ||

ಜಾಲಮಾತುಗಳಲ್ಲ | ತ್ರಿ |
ಶೂಲಿಯೆ ಪೇಳುವ ಸೊಲ್ಲ ||
ಖಳನೋರ್ವನು ಭೂ | ಪಾಲರ ಜಯಿಸುತ |
ದಾಳಿಯಿಟ್ಟ ನ | ಮ್ಮಾಲಯಕಿಂದಿಲೆ || 266 ||
ಸುರರೆಲ್ಲರನು ಗೆಲಿದ | ನಿ |
ರ್ಜರರ ಐಸಿರಿ ಸುಲಿದ ||
ಧುರದೊಳೆಚ್ಚಾಡಲು | ಬಿರುಸಾದನು ಖಳ |
ಮರಣವಿಲ್ಲೆನುತಜ | ವರವಿತ್ತಿಹನಂತೆ || 267 ||
ಎಂದೆನಲಾ ಮೃಡ ಕೇಳಿ | ಬಳಿ |
ಕೆಂದನು ಧೈರ್ಯವ ತಾಳಿ ||
ಕೊಂದು ಕೊಡುವೆನಾ | ಮಂದಮತಿಗಳನು |
ಬಂದು ನಿಮ್ಮ ಜತೆ | ಯಿಂದಲಿ ಸ್ವರ್ಗಕೆ || 268 ||

**ಕಂದ**

ಸಂಕ್ರಂದನಾದ್ಯರಿಗಭಯ |
ಮಂ ಕರುಣಿಸುತತಿ ಹರುಷದಿ ಪರಮೇಶ್ವರನುಂ ||
ಪಂಕರುಹಾಂಬಕಿಯಾನನ |
ಮಂ ಕಾಣುತಮವಳೊಳೆಂದನತಿ ಮೋಹದೊಳುಂ || 269 ||

**ಭೈರವಿ - ಝಂಪೆ**

ಇಂದುಮುಖಿ ಕೇಳಿದೆಯ | ಇಂದ್ರಾದಿಗಳ ಸ್ವರ್ಗ |
ದಿಂದಟ್ಟಿ ಸುರಪಟ್ಟ | ಪೊಂದಿ ಮುದದಿಂದ || 270 ||
ದುರುಳರಾಳುವರೆಂದು | ದೂರಿಕೊಂಡರು ಬಂದು |
ಧುರದೊಳಸುರರ ಕೊಂದು | ಸುರರ ಸಂಪದವ || 271 ||
ಅನಿಮಿಷರಿಗೊಲಿದಿತ್ತು | ಕ್ಷಣದೊಳಗೆ ಬಹೆನೆಂದು |
ಗಣಪತಿಯ ಪಿತ ಪೊರಟ | ಗಣಗಡಣದಿಂದ || 272 ||

**ಭಾಮಿನಿ**

ಗಿರಿಜೆಯೊಡನಿಂತರುಹಿ ಶೂಲಿಯು |
ಪರಮ ಹರುಷಾರ್ಣವದಿ ಬಂದನು |
ಶರಣರೊಡಗೊಳುತಂದು ನಂದಿಯನೇರಿ ತ್ವರಿತದಲಿ ||
ಬರಲಿಕಮರಾವತಿಯ ದ್ವಾರದಿ |
ಚರರು ಪೋಗದಿರೆಂದು ತಡೆಯಲು |
ಮುರಿದು ಮುಂಬರಿಯಲು ಜಲಂಧರ ಕಾಣುತಿಂತೆಂದ || 273 ||

**ಭೈರವಿ - ಏಕ**

ಬಂದೆಯ ಬಲವೈರಿ ನೀನು | ಈ |
ನಂದಿಯೇರಿಹನಾರಿವನು ||
ಕಂಧರದೊಳು ರುಂಡಮಾಲೆ | ಬಲು |
ಚಂದದೆ ಜಡೆ ತಲೆ ಮೇಲೆ || 274 ||
ಕರಿಚರ್ಮವ ಹೊದ್ದಿಹನು | ಮೈ |
ಗೊರೆಸಿಕೊಂಡಿಹ ಬೂದಿಯನು ||
ನೆರವಿಗೆನುತ ಕರೆತಂದು | ಬರಿ |
ಬರಿದೆ ನೀ ಕೊಲಿಸದಿರಿಂದು || 275 ||

ಧನುವನು ಝೇವಡಿಸಿದನು | ಖಳ |
ಘನಶರಗಳ ಬಿಡಲದನು ||
ಅನಿಮಿಷರೊಡೆಯನು ಕಡಿದ | ಖಳ |
ದನುಜಗೆ ಮರಳಿ ತಾ ನುಡಿದ || 276 ||
ಈತನೆ ಖಳಕುಲಕಾಲ | ಜಗ |
ನ್ನಾಥನು ಸಜ್ಜನಪಾಲ ||
ಘಾತಿಸೆ ನಿನ್ನನು ಶೂಲ | ಪಿಡಿ |
ದೀತ ಬಂದನು ಗಜಚೇಲ || 277 ||
ಆಸು ಬಾಣಂಗಳ ತರಿದು | ಘನ |
ರೋಷದಿ ದನುಜನು ಮುಳಿದು ||
ರೋಷದಿ ಕಣೆಮಳೆಗರೆಯೆ | ಆ |
ವಾಸವನಾಥನು ಮುರಿಯೆ || 278 ||

**ಭಾಮಿನಿ**

ಬಿಲ್ಲು ಮುಕ್ಕಡಿಗೆಯ್ಯಲಾ ಖಳ |
ನಲ್ಲಿ ಸಮರಕೆ ನಿಲ್ಲಲಾರದೆ |
ಮೆಲ್ಲನಮರಾಧಿಪನು ಮೃಡನುರು ಬೆನ್ನ ಮರೆಗೊಂಡು ||
ಫುಲ್ಲಚಾಪಾಂತಕನು ದಶಕರ |
ದಲ್ಲಿ ಧನುಶರಗಳನು ಕೊಳುತಲಿ |
ಮಲ್ಲ ಸಾಹಸ ಮುಳಿದು ಕ್ರೋಧದೊಳೆಂದನವನೊಡನೆ || 279 ||

**ಶಂಕರಾಭರಣ - ಮಟ್ಟೆ**

ಯಾತುಧಾನ ಕೇಳು ಸುರಪ | ಸೋತನೆನುತಲಿ ||
ಬೀತು ಹರುಷಗೊಳಲು ಕೆಡುವೆ | ಕೋತಿಮನದಲಿ ||
ತಾತನಾರು ನಿನ್ನ ಪಡೆದ | ಮಾತೆ ಯಾವಳು ||
ಯಾತಕಿಲ್ಲಿ ಬಂದೆ ಕಲಹ | ವೇತಕಿವರೊಳು || 280 ||
ಎನುತಲೆಚ್ಚ ಕಿಚ್ಚಿನಂತ | ಘನಶರಂಗಳ ||
ಮನುಮಥಾರಿಯೊಡನೆ ಕಡಿದು | ದನುಜ ಕೋಲ್ಗಳ ||
ಚಿನುಮಯಂಗೆ ಹೂಡಲದರ | ಮನಕೆ ತಾರದೆ ||
ಕಿನಿಸಿನಿಂದಲೆಸೆದ ಕಣೆಯ | ಎಣಿಕೆಯಿಲ್ಲದೆ || 281 ||
ಕುಟ್ಟಿ ಕಳೆದನನಿತನೆಲ್ಲ | ದಿಟ್ಟತನದಲಿ |
ಸಿಟ್ಟಿನಿಂದ ಕುದಿದು ತೂಗು | ತಿಟ್ಟನಂಬನು ||
ಸೃಷ್ಟಿಗೊಡೆಯ ಮಾಪುಗೆಯ್ದು | ತಟ್ಟನದರನು ||
ಕೆಟ್ಟ ಮೂಳ ಸಾಯೆನುತ್ತ | ಲಿಟ್ಟ ಕುಲಿಶನು || 282 ||
ಬಗೆಯದಸುರ ನಿಲಲು ಕಂಡು | ಬೇಗ ತ್ರಿಣಯನು ||
ತೆಗೆದು ಖಂಡೆಯದಲಿ ಹೊಯ್ದು | ಅಗಜೆಯರಸನು ||
ಪಗೆಯ ಗೆಲುವೆನೆನುತ ಕುಂತ | ಒಗೆಯಲದರನು ||
ಸೊಗಸಿನಿಂದ ಮುರಿಯೆ ದೈತ್ಯ | ನಿಗಮಸಿದ್ಧನು || 283 ||
ಒಂದು ಕಡೆಯೊಳೆಸೆಯೆ ಬಂದ | ರೊಂದು ದೆಸೆಯಲಿ ||
ಹಿಂದು ಮುಂದು ಹೊಗಲುಗೊಡದೆ | ಸಂಧಿಸುತ್ತಲಿ ||
ಕುಂದದೆಚ್ಚುತಿರ್ದರಿರ್ವ | ರೊಂದೆ ಮತದಲಿ ||
ಸಿಂಧುಘೋಷ ಮಸಗೆ ದಿತಿಜ | ನೆಂದನವರಲಿ || 284 ||
ಹೂಣಿಗಾರರಹುದೊ ಭಳಿರೆ | ಕಾಣಲುಭಯರು ||
ಬಾಣವೇಗ ಕಲಿಸಿದಾತ | ಜಾಣನಹ ಗುರು ||
ತ್ರಾಣದಿಂದ ವಿಶಿಖಗೊಂಡು | ಕೌಣಪೇಂದ್ರನು ||
ಗೋಣ ತರಿವೆನೆನುತ ಬರಲು | ಸ್ಥಾಣುಸುರಪನು || 285 ||

**ಭಾಮಿನಿ**

ಧುರದೊಳೀಪರಿ ಮೂರು ದಿನ ಹಗ |
ಲಿರುಳು ಹಳಚಿದರಳುಕದಾ ಖಳ |
ತರುಬುತಯ್ತರೆ ಭರದೊಳಾತನ ಕರದ ಖಂಡೆಯವ ||
ಮುರಿದು ಮುಕ್ಕಡಿಗೆಯ್ಯೆ ಕ್ರೋಧದಿ |
ಶಿರವನಪ್ಪಳಿಸಲ್ಕೆ ಕರುಣಾ |
ಕರ ಸದಾಶಿವ ಕಂಡು ವಾಸವಗೆಂದ ವಿನಯದಲಿ || 286 ||

**ಮಾರವಿ - ಆದಿ**

ಕೇಳು ಪೇಳ್ವೆನೊಂದನು ಮಾತ | ಸುರರಾಯ | ನಮ್ಮ |
ತೋಳ ಬಲುಹು ಕೊಳ್ಳದಿವನ | ಸುರರಾಯ ||
ಬಾಳಲಿಪಿಯನೊರೆಸಲಿಕ್ಕೆ | ಸುರರಾಯ | ನಾನು |
ಆಲೋಚಿಸಿದೆ ಮನದೊಳೀಗ | ಸುರರಾಯ || 287 ||
ಈಸು ಬಳಲಲಿದುವೆ ವ್ಯರ್ಥ | ಸುರರಾಯ | ಇವನ |
ಗಾಸಿ ಮಾಳ್ಪೆ ಕ್ಷಣದೊಳೀಗ | ಸುರರಾಯ ||
ಮೋಸವಾಯಿತೆಮ್ಮಿಂದಲೆ | ಸುರರಾಯ | ಮೊದಲೆ |
ವಾಸುದೇವನ ಕರೆಸದೆ | ಸುರರಾಯ || 288 ||
ಹಳಚು ನೀನು ಈತನೊಡನೆ | ಸುರರಾಯ | ಒಂದು |
ಘಳಿಗೆ ಮಾತ್ರ ಬೇಸರಿಸದೆ | ಸುರರಾಯ ||
ನಳಿನನಾಭನನು ಬರಿಸುವೆ | ಸುರರಾಯ | ಎಂದು |
ಹರಿಯನು ಸ್ಮರಿಸುತಲಿರ್ದ | ಗಿರಿಜಾಪ್ರೀಯ || 289 ||

**ವಾರ್ಧಕ**

ಜಯ ಜಯ ಜಗನ್ನಾಥ ದೇವ ಮನ್ಮಥತಾತ |
ಜಯ ದಿತಿಜಕುಲಕಾಲ ಭಕ್ತಜನಪರಿಪಾಲ |
ಜಯ ಸುಪರ್ಣವರೂಥ ಶೌರ್ಯನಿಧಿಸದ್ಭರಿತ ಜಯ ರಮಾಮೋಹನಾಂಗ ||
ಜಯ ಚಾರುಚಾರಿತ್ರ್ಯ ಶತಪತ್ರನಿಭನೇತ್ರ
ಜಯ ದೋಷಘಟನಾಶ ನಿಗಮ ನಿರ್ಮಲ ಪೋಷ |
ಜಯ ಚತುರ್ಭುಜಮೂರ್ತಿ ಸುಲಲಿತೋತ್ತಮಕೀರ್ತಿ ಜಯವೆಂದು ನುತಿಗೈದನು || 290 ||

**ಭಾಮಿನಿ**

ಉಮೆಯರಸನಿಂತೆನುತ ಸ್ಮರಿಸಲು |
ರಮೆಯರಸನದನರಿತು ಕಪಟದಿ |
ಯಮರಲೋಕಕೆ ಪೋದ ಖಳ ಬರಲಿಲ್ಲವೇಕೆನುತ ||
ಕ್ರಮವರಿತು ತಾ ಬರುವೆನೆನುತಲಿ |
ರಮೆಗೆ ಸೂಚಿಸಿ ಬಂದು ವಹಿಲದಿ |
ಸುಮಶರಾರಿಯ ಕಂಡು ಆಲಿಂಗಿಸುತ ಬೆಸಗೊಂಡ || 291 ||

**ಕಾಂಬೋಧಿ - ಅಷ್ಟ**

ಏನಿದಾಶ್ಚರ್ಯವೈ ಹರ ಮಹಾದೇವ |
ಸಾನುರಾಗದೊಳೆನ್ನ ಸ್ಮರಿಸಿದೈ ಅಭವ || ಪ ||
ಬವರವಾರೊಡನೆ ಸಂಭವಿಸಿತೀಪರಿ ಮೂರು |
ಭುವನದೊಡೆಯ ನಿನ್ನ ಹವಕಿದಿರಾಗುವ |
ಸವಡಿಗರಾರವನ | ತೋರಿದರೀಗ |
ಸವರುವೆ ಕ್ಷಣಕವನ | ತಾನೆನುತಲಿ |
ತವಕದಿ ಪೇಳೆನಲೊರೆದ ತ್ರಿಣಯನ || 292 ||

ಖೂಳ ಜಲಂಧರನೆಂಬವ ಸುರರನು |
ಕೋಳುಗೊಂಬನು ಬಲಾತ್ಕಾರದಿ ತಮ್ಮಯ |
ಆಲಯ ವಸತಿಗೆಯ್ದ | ನೆಂದೆನುತೆನ್ನ |
ಕಾಲ ಮೇಲಡ್ಡ ಗೆಯ್ದ || ಗೋಳೆನುತಮ |
ರಾಳಿ ಕೂಗಿದಡಳಲುತ | ಸ್ವೈರಿಸದಾನು |
ಕೇಳಿದಾಕ್ಷಣ ಬಂದು ಕಾಳಗಕಿದಿರಾದೆ || 293 ||
ಶತಮಖಸಹಿತ ನಾವೀರ್ವರು ಹಳಚಲು |
ಪ್ರತುಳ ಬಲಾಢ್ಯನು ಧೃತಿಗೆಡದಿರೆ ಚಮ |
ತ್ಕೃತಿ ನಿನ್ನೊಳಿಹುದೆನುತ | ಆ ಮೇಲೆಮ್ಮ |
ಮತಿಗರಿವಾಯ್ತೆನುತ || ನಿನ್ನನು ಬಾರೆಂ |
ದತಿ ಬೇಗ ನೆನೆದೆನು ತಾ | ಮುಂದೇನೆಂದು |
ಶಿತಿಕಂಠನೆಂದುದ ಕೇಳಿ ಶ್ರೀಹರಿಯೆಂದ || 294 ||

**ಸೌರಾಷ್ಟ್ರ - ತ್ರಿವುಡೆ**

ಲಾಲಿಸಾದರೆ ಸಾಂಬ ನಿನ್ನೊಳು |
ಕಾಳಗದೊಳೀ ದಾನವಧಿಪನು |
ಸೋಲದಿರುವರೆ ಕಾರಣಂಗಳ | ಪೇಳಲಿಹೆನು || 295 ||
ಅಜನ ವರಬಲದಿಂದ ಬಾಧಿಪ |
ಸುಜನರನ್ನುಪದ್ರಿಸುವ ಮತ್ತಾ |
ರಜನಿಚರನರಸಿಯ ಪತಿವ್ರತ | ತ್ಯಜಿಸದಿವಗೆ || 296 ||
ಹನನವಿಲ್ಲವಗೆನುತವನ ಗುರು |
ವಿನ ಕಟಾಕ್ಷದಿ ಮೆರೆವನೀತನ |
ವನಿತೆಯಳ ವ್ರತ ಭಂಗಿಸುವೆ ನಾ | ದನುಜಶಿಕ್ಷ || 297 ||
ಎಂದು ಮೃಡನೊಳು ನೇಮವನು ಪಡೆ |
ದಂದು ಪೊರಮಟ್ಟಾಗಲಾ ಗೋ |
ವಿಂದ ಕೃತಕವ ನೆನೆದು ಧರೆಗೈ | ತಂದನಾಗ || 298 ||

**ವಾರ್ಧಕ**

ಯಮಿಗಳಿರ ಕೇಳಿರೈ ಹರಿಯ ಬೀಳ್ಕೊಟ್ಟು ತಾ |
ನುಮೆಯರಸ ದೈತ್ಯರೊಳು ಸಮರ ಗೆಯ್ಯುತ್ತಿರಲು |
ಕಮಲನಾಭನಂ ಪೃಥ್ವಿಗಯ್ತಂದು ದಾನವನ ಪುರದ ಹೊರವಲಯದೊಳಗೆ ||
ಅಮಿತಫಲಪುಷ್ಪಗಳ ಮರಗಳಿಂ ಗಿರಿಗಳಿಂ |
ಚಮರಿ ಮುಂತಾದಮಿತ ಮೃಗಗಳಿಂ ಖಗಗಳಿಂ |
ವಿಮಲೋದಕದಿ ಮೆರೆವ ಕೊಳಗಳಿಂ ಸ್ಥಳಗಳಿಂ ಭ್ರಮರಾಳಿ ಝೇಂಕರಿಸಲು || 299 ||

**ಭಾಮಿನಿ**

ಇನಿತು ಸುರವನದಂತೆ ಶೋಭಿಪ |
ವನವನೊಂದನು ರಚಿಸುತದರೊಳು |
ಮುನಿಗಳನು ನಿರ್ಮಿಸುತ ಮಾಯಾಮಹಿಮನೊಲವಿನಲಿ ||
ಮನದಿ ಜ್ವಾಲಾಂಬಕನ ನೆನೆವುತ |
ಘನಮಹಿಮನಿಂತೆಸಗೆ ಸಹನದಿ |
ದಿನಪನುದಯಾಚಲಕೆ ಬರೆ ತಾ ಕಪಟಯತಿಯಾಗಿ || 300 ||

**ಆರ್ಯಾ ಸವಾಯಿ - ಏಕ**

ಈ ಪರಿ ರೂಪವ ತಾಳುತ ಶ್ರೀ ಹರಿ |
ತಾಪಸರಂದದೊಳಿರುತಿರಲು ||
ಆ ಪೂರ್ವಾಮರನರಸಿಯು ರಮೆಯೊಳು |
ತಾ ಪೇಳ್ದಳು ಬಲು ತಾಪದೊಳು || 301 ||

**ಶಂಕರಾಭರಣ - ಮಟ್ಟೆ**

ಕೇಳು ಶ್ರೀರಮೆ | ಕರುಣಸಾಗರೆ |
ನೀನು ಎನ್ನಯ | ಮನದ ಚಿಂತೆಯ ||
ಕಾಳಗಕೆಂದು | ಪೋದ ರಮಣನು |
ಆಲಯಕಿಂದು | ಬಾರನೇತಕೆ || 302 ||
ನಿಮಿಷರಹಿತರು | ನಿಗಮಸಿದ್ಧರು |
ಅಮಿತ ಶೌರ್ಯರು | ಏನಗೆಯ್ವರೊ ||
ಅಮಿತ ಕಲೆಗಳು | ಅಮರ ಸ್ತ್ರೀಯರೊಳ್ |
ಭ್ರಮಿಸಿ ಸೋತನೊ | ಭಾಮಿನೀಮಣಿ || 303 ||
ಮೋಡಿಯೇನಿದ | ಆಡಿಯೆಂಬುದು |
ನೋಡಿ ಬರುವೆನು | ಕೂಡಲಿಲ್ಲಿಗೆ ||
ಮಾಡಿ ವಂದನೆ | ಕೂಡೆ ಪೊರಡಲು |
ಗಾಡಿಗಾರ್ತಿಯು ನೋಡಿ ಪೇಳ್ವಳು || 304 ||

**ಆನಂದಭೈರವಿ - ಅಷ್ಟ**

ಏಕೆ ಮರುಗುವೆ ಸುಲಲಿತಾಂಗಿ ವಿವೇಕವಲ್ಲದನು || ಪ ||
ಯಾಕೆರೆಯನಿರಲೇಕೆ ಬಳಲುವೆ |
ನಾ ಕರೆಸಿ ಕೊಡುವೆ | ಪ್ರಿಯನಾ |
ನಾಕನಿಳಯಕೆ ಪೋಪೆನೆಂಬೆಯ |
ದಾ ಕಡೆಯೊಳಿಹುದು | ಸುಮ್ಮನೆ |
ವ್ಯಾಕುಲವು ಬರಿದೇಕೆ ಬಿಡು ಬಿಡು |
ಸಾಕು ಸೈರಿಸಿನ್ನು ||
ಲೋಕಪಾಲರಿಗೆಂಟು ಠಾವಿದೆ |
ಲೋಕಲೋಕಗಳಲ್ಲಿ ಬಳಿಕಾ |
ಪಾಕಶಾಸನನೆಲ್ಲಿಹನೊ ರಣ |
ದಾ ಕಡೆಯದೆಲ್ಲಿನುತಲರಸುವೆ || 305 ||
ಮೂರು ಲೋಕದೊಳಿದ್ದರಾತನ |
ತೋರಿಸುವೆ ನಿನಗೆ | ಎಂದರೆ |
ಮೀರಿ ಪೋಪೆಯ ಕಾರಿಯವು ಕೈ |
ಸೇರುವುದೆ ನಿನಗೆ | ಚಿತ್ರವ |
ಮಾರನಂಬಿಗೆ ಚಿತ್ರವನು ನೀ |
ಮಾರದಿರು ಬರಿದೆ ||
ಸಾರಿ ಮನೆಯೊಳು ಮಿಣ್ಣಗಿರು ನೀ |
ನಾರಿಮಣಿಯೆ ವಿಕಾರಿಯೆನಿಸದೆ || 306 ||

**ವಾರ್ಧಕ**

ಏನ ಪೇಳಿದರು ಕೇಳದೆ ಮಾತ ಮೀರಿಯಾ |
ಮಾನಿನಿಯು ಪ್ರಾಣಪತಿಯಂ ನೋಳ್ಪಪೇಕ್ಷೇಯಿಂ |
ದಾ ನಗರಮಂ ಬಿಟ್ಟು ಪೊರಮಡಲ್ಕೀಕ್ಷಿಸುತಲಾಪಸಾಯ್ದೆಯರು ಬಳಿಕ ||
ಏನಿದೆಮ್ಮೊಡತಿಯೇಕಾಂಗಿ ಗಮಿಸುವಳೆಂದು |
ತಾನಾಗಿ ಬೆಂಬತ್ತಿ ಬಂದರೈ ಕಾಮಮರಿ |
ಯಾನೆಗಳ ದಂಡೆಂಬವೋಲ್ ನಡೆದರೇನೆಂಬೆನಾಶ್ಚರ್ಯಮಾಗೆಸೆದುದು || 307 ||

**ಆನಂದಭೈರವಿ - ಆದಿ**

ರಮಣನ ಕಾಂಬಾಸೆಯಿಂದ | ಕಮಲನೇತ್ರೆ ಪಥವ ಪಿಡಿದು |
ಸಾರುತ್ತ | ಮಮತೆ | ಬೀರುತ್ತ || 308 ||
ಕರುಣನಿಧಿಯೆ ಮೊಗದೋರೆನುತ | ಕರೆದು ಬಯಲಪ್ಪುತ ಮನದಿ |
ಭ್ರಮಿಸುತ್ತ | ನಡೆದು | ಶ್ರಮಿಸುತ್ತ || 309 ||

ಎನ್ನನಗಲಿ ಯಾವ ಸತಿಯ | ರನ್ನು ನೀನೊಲಿದೆನ್ನ ಮರೆತೆ |
ಯೆಂದಳು | ಹಲುಬಿ | ನೊಂದಳು || 310 ||

**ಸೌರಾಷ್ಟ್ರ - ತ್ರಿವುಡೆ**

ಇಂತು ಸಖಿಯರುಸಹಿತ ದೈತ್ಯನ |
ಕಾಂತೆಯತಿವೇಗದಲಿ ಲಕ್ಷ್ಮೀ |
ಕಾಂತ ಕೃತಕದ ಯತಿಯ ರೂಪವ | ನಾಂತು ಕುಳಿತ || 311 ||
ವನಸಮೀಪಕೆ ನಡೆಯೆ ಕಾಣುತ |
ವನಿತೆಯರ ಮುಂದೆಸೆಯೊಳೀರ್ವರ |
ದನುಜರನು ನಿರ್ಮಿಸುತ ಬಿಟ್ಟನು | ವನಜನೇತ್ರ || 312 ||
ಮಾಯದಸುರರು ಗರ್ಜಿಸುತ್ತಲಿ |
ಕಾಯ ಭೀಕರರೂಪಿಗಳು ಮೆಯ್ |
ಹಾಯಲಯ್ತರೆ ನೋಡಿ ಸತಿ ಸಮು | ದಾಯ ಬೆದರೆ || 313 ||
ಚೆಲ್ಲಿ ದೆಸೆದೆಸೆಗೋಡಿದರು ಆ |
ಫುಲ್ಲಲೋಚನೆ ವೃಂದೆಯೊರ್ವಳು |
ಖುಲ್ಲ ಖಳರೊಳು ಸಿಲುಕೆ ಪೇಳ್ವರು | ಘುಲ್ಲಿಸುತಲಿ || 314 ||

**ಆರ್ಯಾ ಸವಾಯಿ - ಏಕ**

ಹಿಡಿ ಹಿಡಿ ನೋಡಾ ಹುಡುಗಿಯ ಮುಂದಕೆ |
ಬಿಡದಿರುಯೆಂದೆನುತ ||
ಧಡಿಗರು ಪಥವಡ್ಡೈಸಲು ಕಾಮಿನಿ |
ನಡುಗಿದಳ್ ಕಂಗೆಡುತ || 315 ||
ಮರವೆಯಂದದಿ ಸೊರಗುತ ಮತ್ತೆಚ್ಚರಿ |
ದರಿತಸುರರ ನೋಡಿ ||
ಹರಿ ಸರ್ವೋತ್ತಮ ಸಲಹೆಂದೆನುತಲಿ |
ಸ್ಮರಿಸುತ ಮುಂದೋಡಿ || 316 ||
ಸ್ತುತಿಸುತಲಂಘ್ರಿಗೆ ಬಿದ್ದಳು ತಾ ಪತಿ |
ವ್ರತೆಯಳು ಮೊರೆಯಿಡಲು ||
ಮತಿಗದು ಗೋಚರಿಸದ ತೆರದೊಳಗಾ |
ಯತಿ ತಪದೊಳಗಿರಲು || 317 ||
ಕಾಣುತಲಾಕೆಯು ಯಮಿತಿಲಕನ ಪದ |
ಕಾನತಳಾಗುತಲಿ ||
ಮಾಣದೆಚ್ಚರಿಸುವೆನೆಂದೆನುತಸುರನ |
ರಾಣಿ ಮತ್ತುಸಿರಿದಳು || 318 ||

**ಕಲ್ಯಾಣಿ - ಅಷ್ಟ**

ಹೋವ್ಹೋ ಹೋ ಯತಿವರ್ಯ | ನಾನೆಂಬುದ |
ನೀವೊಲಿದಾಲಿಸಯ್ಯ ||
ಠಾವು ಗಾಣದೆ ಶಶಿರಾಹುವಡ್ಡೈಸಿ |
ದಾವಾಸದಂತಾಯ್ತು ಕಾವುದೈ ಕರುಣದಿ || 319 ||
ದಾರಿಯ ಬಿಡದಿರಿನ್ನು | ರಕ್ಕಸರೀಗ |
ಹಾರೈಸುತಲಿಯೆನ್ನ ||
ಗಾರುಡಿಗರೊಳ್ ಸಿಕ್ಕಿದುರಗನಂತಾದೆ |
ಕಾರಣಿಕನೆ ದಯೆದೋರಿ ನೀ ಸಲಹೀಗ || 320 ||

ಪತಿವ್ರತೆಯರ ಮನಕೆ | ದಾತಾರರು |
ಯತಿವರ್ಯರೆಂಬುದಕೆ ||
ಮತಿಯುತ ನೋಡು ಈ | ದಿತಿಜರ ಕಯ್ಯಿಂದ |
ಲತಿ ಬೇಗ ಸಲಹೆನ್ನ | ಸತತ ಸೌಖ್ಯಗಳಿತ್ತು || 321 ||

**ಭೈರವಿ - ಝಂಪೆ**

ಇಂದುಮುಖಿಯೀತೆರದೊ | ಳೆಂದ ಮಾತಿಗೆ ಮುನಿಪ |
ಕಂದೆರೆದು ನೋಡಿ ಬಳಿ | ಕೆಂದನವಳೊಡನೆ || 322 ||
ಯಾವ ದೇಶದೊಳಿಪ್ಪ | ಯಾವ ಭೂವರನರಸಿ |
ಯೇವಿಷಯಕಯ್ತಂದೆ | ಈ ವಿಪಿನಕೆನಲು || 323 ||
ಎಲೆ ತಪೋನಿಧಿ ಕೇಳು | ಖಳ ಜಲಂಧರನರಸಿ |
ಕುಲದೊಳುತ್ತಮ ಪಿತನು | ತಿಳಿ ಕಾಲನೇಮಿ || 324 ||
ಸುರಲೋಕಕಯ್ದನೆ | ನ್ನರಸನೀವರೆಗೇಕೆ |
ಬರಲಿಲ್ಲವೆನುತವನ | ಅರಸುತಯ್ತಂದೆ || 325 ||
ಹುಲಿಯ ಬಾಯೊಳು ಸಿಕ್ಕಿ | ದೆಳೆಪಶುವಿನಂತಾದೆ |
ತಿಳಿದು ಸಲಹೆನಲೆಂದ | ನಳಿನಾಕ್ಷಿಗಾಗ || 326 ||

**ಭಾಮಿನಿ**

ಎಲೆಲೆ ಭಾಮಿನಿ ಯಾಕೆ ಬೆದರುವೆ |
ಖಳರ ಭಂಗಿಸಿ ಕಾಯ್ವೆನೆನುತಲೆ |
ಗಳಿಗೆಗಸುರರು ಬರಲು ಅವರನು ನೋಡಿ ಕಂಗೆಡಲು ||
ಕಳವಳಿಸಬೇಡೆನುತಲಾ ಮುನಿ |
ತಿಲಕ ಧೈರ್ಯವ ಪೇಳಿ ಮಂತ್ರದ |
ಸಲಿಲ ಪ್ರೋಕ್ಷಿಸುತಸುರನಾಶನ ಗೆಯ್ಯಲಬುಜಾಕ್ಷಿ || 327 ||

**ಆರ್ಯಾ ಸವಾಯಿ - ಏಕ**

ಕರುಣಾಕರ ಘನಮಹಿಮನು ಈ ಋಷಿ |
ವರನು ಕಟಾಕ್ಷದಲಿ ||
ಎರೆಯನ ದರ್ಶನ ದೊರಕಿಪನೆನುತಲಿ |
ಹರುಷಿಸುತುಸಿರಿದಳು || 328 ||

**ನೀಲಾಂಬರಿ - ಆದಿ**

ಮುನಿರಾಯ ಲಾಲಿಸಯ್ಯ | ನಾ ಪೇಳುವೆ |
ಮನಸಿನಾಲೋಚನೆಯ ||
ಇನಿಯನ ಬಿಟ್ಟಿಹೆನು | ಸಿಕ್ಕುವನೆಲ್ಲಿ |
ಘನಮಹಿಮನೆ ಪೇಳಿನ್ನು || 329 ||
ಎನುತ ಚಾಲ್ವರಿವುತಲಿ | ಪೇಳಿದ ಮಾತ |
ಮುನಿಪತಿ ಕೇಳುತಲಿ ||
ವನಿತೆ ಈ ಪಥದಿ ನೀನು | ಪೋದರೆ ಮುಂದೆ |
ದನುಜರ ಭಯವಿಲ್ಲಿನ್ನು || 330 ||
ತವಕದಿ ನಿನ್ನವನು | ದೊರಕುತ್ತಲಿ |
ಸುವಿಲಾಸಗೊಳಿಸುವನು ||
ಅವಧರಿಸೆನ್ನ ಮಾತ | ನಿಶ್ಚಯವೆಂದು |
ಕುವಲಯಾಂಬಕಿಗೆಂದನು || 331 ||

ಪರಸುತ್ತ ಬೀಳುಗೊಡಲು | ಕಾಮಿನಿಮಣಿ |
ಯರಸುತ್ತಲಡವಿಯೊಳು ||
ಬರುತಿರಲಿತ್ತ ಕಂಡು | ಆ ಮುನಿಯು ಕಂ |
ಡಿರದೊಂದ ನೆನೆದನಂದು || 332 ||

**ವಾರ್ಧಕ**

ತರಳೆಯಳಿಗಿಂತೆನುತ ಪರಸಿ ಬೀಳ್ಕೊಡಲಾಗ |
ದುರುಳನನು ಕಾಂಬುತ್ಸಹದಿ ಪಥವನೀಕ್ಷಿಸುತ |
ಬರಲವಳ ಮುಂದೆಸೆಯೊಳಾ ಕೃತಕಯತಿಯಾಗ ಸರಸದಿಂದದತಿವೇಗದಿ ||
ವರ ಜಲಂಧರನ ರೂಪವ ತಾಳಿಕೊಳುತಾಗ |
ಸರಿಸಕಯ್ತರಲು ಸತಿ ನೋಡಿ ಪತಿಯೆಂದೆನುತ |
ಬರಸೆಳೆದು ಬಿಗಿದಪ್ಪಿ ಕೊಂಡಾಡುತಿರಲಾಗ ಕಪಟದಾ ಖಳ ಪೇಳ್ದನು || 333 ||

**ಶಂಕರಾಭರಣ - ಆದಿ**

ವಲ್ಲಭೆ ನೀನೋರ್ವಳೇಕೆ |
ಬಲ್ಲಿದ ಘೋರಡವಿಗಯ್ದೆ |
ಫುಲ್ಲನೇತ್ರೆ ಪೇಳು ತಳುವ | ವಿಲ್ಲದೆನ್ನೊಳು || 334 ||
ನಾಳೆ ಬರುವೆನೆಂದೆನ್ನೊಳು |
ಚಾಳಿಸುತ್ತಲಯ್ದಿ ಸುರರ |
ಸೂಳೆಯರಿಗೊಲಿದೆ ನೀನು | ತಾಳದಾದೆಯ || 335 ||
ಮರೆತೆಯೆಂಬುದರಿಂದಾನು |
ಅರಸಿಕೊಂಡು ಬಂದೆನೆಂದ |
ಸರಸಿಜಾನನೆಯೊಳು ಪೇಳ್ದ | ಹರುಷಗೊಳಿಸುತ || 336 ||
ರಮಣಿ ಕೇಳು ನಿನ್ನಂತೆನಗೆ |
ಮಮತೆ ಬೇರೆಯವರೊಳುಂಟೆ |
ಕಮಲಗಂಧಿ ಬಾರೆಂದೆನುತ | ಸುಮನಸದಲಿ || 337 ||
ಚುಂಬಿಸುತ್ತಲಧರವ ಕಚ್ಚಿ |
ಕುಂಭಕುಚ ಕೈಗಿಂಬುಗೊಳಿಸಿ |
ಸಂಭ್ರಮದಲಿ ರತಿ ಕೇಳಿಗಾ | ರಂಭಿಸುತ್ತಲಿ || 338 ||

**ಭಾಮಿನಿ**

ಕಾಂತನೆಂದೇ ಬಗೆದು ಮಾನಿನಿ |
ಕಂತುಕೇಳಿಯೊಳಿರಲಿಕಿತ್ತಲು |
ಕಂತುಜಿತನಮರಾವತಿಯ ಪಟ್ಟಣದಿ ಸಮರದೊಳು ||
ನಿಂತು ಪೇಳಿದನೆಲೆ ಜಲಂಧರ |
ಸಂತು ನಿನ್ನಯ ಬಾಳ ಲಿಪಿಯದ |
ಗೊಂತುಗೊಳಿಸುವೆ ನಿನಗೆ ಕಾಲನ | ಪುರಕೆ ಕಳುಹುತಲಿ || 339 ||

**ಭೈರವಿ - ಏಕ**

ಎನುತೆಚ್ಚಸ್ತ್ರವ ತರಿದ | ಆ |
ಮನುಮಥವೈರಿಯೊಳೊರೆದ || ಪ ||
ಮಸಿಗೊರಳನೆ ಕೇಳಿಂದು | ನಿ |
ನ್ನಸು ತೊಲಗಿಸುವೆನುಯೆಂದು ||
ಎಸೆದನು ಶೈಲಾಸ್ತ್ರವನು | ಖಂ |
ಡಿಸಿದನು ಕುಲಿಶದೊಳದನು || 340 ||

ನೋಡುತಲಸುರೇಶ್ವರನು | ಪ್ರತಿ |
ಹೂಡಿದ ಫಣಿಬಾಣವನು ||
ಜೋಡಿಸಿ ಗರುಡಾಸ್ತ್ರದೊಳು | ಕಡಿ |
ಮಾಡಿದನರೆನಿಮಿಷದೊಳು || 341 ||
ಕಾಣುತ ಕಂಗೆಡದಾಗ | ಸುರ |
ಬಾಣನ ಪಿಂಗಳಿ ವೇಗ ||
ಕೌಣಪ ಗರ್ಜಿಸುತೆಸೆದ | ಆ |
ಸ್ಥಾಣುವು ಸಲಿಲದಿ ಗೆಲಿದ || 342 ||
ಬಿಟ್ಟನಿತಹ ಬಾಣಗಳ | ಶಿವ |
ತಟ್ಟನೆ ಪುಡಿ ಗೆಯ್ದಿಸಲು ||
ದಿಟ್ಟ ದನುಜನದ ಕಂಡು | ತಾ |
ನೆಟ್ಟನೆ ಖಡ್ಗವ ಕೊಂಡು || 343 ||

**ಶಂಕರಾಭರಣ - ಆದಿ**

ಕಡಿವೆನೆಂದು ಬರಲು ನೋಡಿ | ನುಡಿದ ಘಮ್ಮನೆ || ಕಳ್ಳ ||
ಧಡಿಗನೆನ್ನ ಶರದಿ ಸಾಯ | ಬೇಡ ಸುಮ್ಮನೆ || 344 ||
ಎಂದು ಕಯ್ಯೊಳಿರುವ ಶೂಲ | ದಿಂದಲಾಕ್ಷಣ || ಬೇಗ ||
ಮಂದಮತಿಯೆ ಬೀಳೆನುತ್ತ | ಲಂದು ದೈತ್ಯನ || 345 ||
ಕೊರಳ ಕತ್ತರಿಸಲು ರುಂಡ | ಧರೆಗೆ ಬೀಳುತ || ಮತ್ತಾ ||
ಶಿರವ ಕೊಂಡೊಯ್ದು ಅವನ | ಅರಸಿಮುಂದಿದ || 346 ||
ಕೆಡಹು ಎಂದು ಶರಕೆ ನೇಮ | ಕೊಡಲು ಕೇಳಿದು || ಆಗ ||
ಪೊಡವಿಯಿಂದ ಸತಿಯ ಮುಂದ | ಕಡರಿ ಬಿದ್ದುದು || 347 ||

**ವಾರ್ಧಕ**

ಹರ ನಿರೂಪಿಸಲು ಮುಂಗಾರಮಿಂಚಿನ ಮರಿಯ |
ತೆರದಿ ದೈತ್ಯನ ಶಿರವು ರಾಹುಮಂಡಲದಂತೆ |
ತಿರುಗಿ ಧೊಪ್ಪನೆ ಧರೆಗೆ ಬೀಳಲಾ ಸತಿ ಕಂಡು ಅರರೆ ಚೋದ್ಯವಿದೆನುತಲಿ ||
ಹರಿತಂದು ಮಸ್ತಕವನೀಕ್ಷಿಸುತಲನಿಮಿಷರ |
ಪರಿಯ ಮಾಯಕವೊಯೆಂದಿರದೆಲ್ಲ ಕುರುಹುಗಳ |
ಪರಿಗ್ರಹಿಸಿ ನೋಡಿದಳು ಕಪಟವಲ್ಲಿದು ತನ್ನ ವರನ ತಲೆಯಹುದೆನ್ನುತ || 348 ||

**ಭಾಮಿನಿ**

ಈಗ ನೆರೆದವ ನೋಳ್ಪನೇ ಖಳ |
ನಾಗ ದೃಢವನು ಪೇಳ್ವ ಯತಿಯೊಳು |
ಬೇಗ ತಿಳಿವೆನೆನುತ್ತ ಬರೆ ಋಷಿ ಕಾಣದಿರಲಾಗ ||
ಆಗವನು ಗೋಚರಿಸದಿರಲಾ |
ನಾಗವೇಣಿಯು ಮರುಗಿ ರುಂಡವ |
ನಾಗ ಕಯ್ಕೊಂಡಳಲಿದಳು ನಾನಾ ಪ್ರಕಾರದಲಿ || 349 ||

**ನೀಲಾಂಬರಿ - ಆದಿ**

ರಮಣ ಎನ್ನ ಮಾತ ಮೀರಿ | ಅಮರಲೋಕಕಯ್ದಿ ||
ಸವನಿಸಿತೆ ಮರಣವಿಂತು | ಸುಮನಸರೊಳ್ ಹಳಚಿ || 350 ||
ಕಮಲಮುಖದ ದಂತಕಾಂತಿ | ಭ್ರಮರೋಪಾದಿಯಾಯ್ತೆ ||
ಕುಮತಿಗಳ ಸಹವಾಸದಿಂ | ಅಮಿತನಿಧಿ ಹೋಯ್ತೆ || 351 ||
ಲಕ್ಷ್ಮೀನಾರಾಯಣರೀಗ ಪ್ರ | ತ್ಯಕ್ಷವೆಮ್ಮಲಿರಲು ||
ಈಕ್ಷಿಸದೆ ಪೋಗಿ ಭಾಗ್ಯ | ಪೇಕ್ಷಿಸಿದೆಯಲ್ಲ || 352 ||

ಮಾತಾಡದಿರ್ಪೆಯ ಇಂಥಾ | ದೇತಕಯ್ಯ ಮುನಿಸು ||
ಖ್ಯಾತ ನಿನ್ನ ರಾಣಿಯು ಅ | ನಾಥೆಯಾಗಿನ್ನಿರೆನು || 353 ||
ಒಡಲ ನಿನ್ನ ಕೂಡಗ್ನಿಗೆ | ಕೊಡುವೆನೀಗೆಂದೆನುತ ||
ಬಿಡುಗಣ್ಣರು ನೋಡಿ ತೋಷ | ಪಡಲಿ ಸೌಖ್ಯವೆನುತ || 354 ||

**ದ್ವಿಪದಿ**
ಈ ಪರಿಯೊಳೆನುತಪ್ಪಿ ಮುದ್ದಿಸುತ ಶಿರವ |
ನಾ ಪತಿವ್ರತೆ ವರನ ಕೂಡೆ ನಿಜ ತನುವ || 355 ||
ನೀಗುವೆನೆನುತಲಗ್ನಿಕುಂಡವನು ರಚಿಸಿ |
ಸಾಗರಜೆ ವಿಷ್ಣುಗಳ ಮನವಾರೆ ಸ್ಮರಿಸಿ || 356 ||
ಪಾವಕನೊಳಿಳಿದಳರಸನ ತಲೆಯ ಸಹಿತ |
ತಾ ವಿನೋದದಿ ವೃಂದೆ ಮಡಿದಳೆಂದೆನುತ || 357 ||
ಕೇಳುತಲ್ಲಿಗೆ ಲಕ್ಷ್ಮಿ ಬಂದಳತಿ ಬೇಗ |
ತಾಳಿ ಚಿಂತೆಯ ಮನದಿ ಯೋಚಿಸಿದಳಾಗ || 358 ||
ಆಶ್ರಿತರಿಗೀ ಬಟ್ಟೆಯಾದ ಬಳಿಕಿಂದು |
ಈ ಸೃಷ್ಟಿಯೊಳಗಿರ್ಪುದುಚಿತವಲ್ಲೆಂದು || 359 ||
ತಪ್ಪದೀ ದೇಹವನು ಹವ್ಯವಾಹನಗೆ |
ಒಪ್ಪಿಸುವೆ ತಾನೆಂದು ಮನದಿ ಹರಿಯಡಿಗೆ || 360 ||
ವಂದಿಸುತ ದುಮ್ಮಿಕ್ಕುವದರೊಳಗೆ ಬಂದು |
ನಿಂದು ಶ್ರೀವರ ಬಿಡದೆ ತಡೆದೆಂದನೊಂದು || 361 ||

**ಭೈರವಿ - ಝಂಪೆ**
ಏನೆ ಲಲಿತಾಂಗಿ ಈ | ಹೀನವೃತ್ತಿಯು ನಿನಗೆ |
ದಾನವನ ಸತಿಯಳಿದ | ದಾವಾಗ್ನಿಯೊಳಗೆ || 362 ||
ಇಂದು ಹಾರುವೆನೆನುವ | ಅಂದವೇನೆನಲು ಗೋ |
ವಿಂದನೊಡನೆಂದಳಾ | ಇಂದುಮುಖಿ ಬಳಿಕ || 363 ||
ಪರಮಾತ್ಮ ಭಕ್ತೆ ಪತಿ | ವ್ರತೆಯೀಕೆಗೀತೆರದ |
ಮರಣವಾದುದರಿಂದ | ಧರೆಯ ಮೇಲಿನ್ನು || 364 ||
ಇರೆನು ತಡೆಯದಿರೆನ್ನ | ತೊರೆದು ಪ್ರಾಣವ ನಿನ್ನ |
ಚರಣದಿದಿರಲಿ ಸೇರ್ವೆ | ತರುಣಿ ವೃಂದೆಯನು || 365 ||

**ವಾರ್ಧಕ**
ಮಾಧವನ ನುಡಿಗೊಡಂಬಡದೆ ಶ್ರೀದೇವಿಯತಿ |
ಕ್ರೋಧಮುಖಿಯಾಗಿ ತಾ ವೃಂದೆಯ ಸ್ಮಶಾನದ ಸ |
ಮಾಧಿಯಲಿ ವಾಸವಾಗಿರುವೆ ನಾ ನೀವು ಬಿಜಯಂಗೆಯ್ಯಿ ಮನೆಗೆನ್ನುತ ||
ಆ ದಯಾನಿಧಿಯೊಳಿಂತರುಹಿ ಸಾಷ್ಟಾಂಗದಿಂ |
ಪಾದಪದ್ಮಾರವಿಂದಕೆ ನಮಿಸಿ ಛಲವಿಡಿದು |
ಶ್ರೀಧರನ ರಾಣಿ ಹತವಾದಳ್ಳೆ ಚಿತೆಯೊಳಗೆ ಮುನಿಗಳಿರ ಲಾಲಿಸುವುದು || 366 ||

**ಭಾಮಿನಿ**

ಇಂದಿರೆಯ ನಿಮಿಷಾರ್ಧವಗಲಿರೆ |
ನೆಂದು ಮಾಯಾಮಹಿಮನಾ ಗೋ |
ವಿಂದ ರಮೆಯಳ ಕೂಡೆ ಪೇಳ್ದಾ ವೃಂದೆಯಾಶ್ರಮದಿ ||
ಮಂದಹರುಷಿತನಾಗಿ ನೆಲೆಸಿಹ |
ನೆಂದೆನುಹ ವಾರ್ತೆಯನು ಕೇಳ್ದಾ |
ಇಂದುಶೇಖರ ಸುರಪ ವಿಧಿ ಮುಖ್ಯಾಮರ ವ್ರಜವು || 367 ||

**ಆರ್ಯಾ ಸವಾಯಿ - ಏಕ**

ಬಂದೆಲ್ಲರು ಹರಿಪದಕೆ ಜಯವೆನುತ |
ವಂದನೆಗೆಯ್ಯುತಲಾಕ್ಷಣದಿ ||
ಚಂದದೊಳಾ ಕಂದರ್ಪನ ಪಿತನೊಳು |
ಎಂದನು ವಿಧಿ ಸಾನಂದದಲಿ || 368 ||

**ದ್ವಿಪದಿ**

ಶ್ರೀಲಕ್ಷ್ಮೀರಮಣ ಏನಿದೈ || ಪ ||
ಕ್ಷೀರಾರ್ಣವವನು ಬಿಟ್ಟಿರುವೈ ಅ |
ಪಾರಮಹಿಮ ಏನ್ ಕಾರಣವೈ || 369 ||
ಹರ ಹರಿ ಮುಖ್ಯಾಮರ ಮೌನಿಗಳು |
ಕರಜೋಡಿಸಿ ಸ್ತುತಿಸುತ್ತಿಹರೈ || 370 ||
ಮೂಜಗದೊಡೆಯ ಮನಸು ಮುನಿಸು |
ಮಾಜದೀಗೆನ್ನೊಳು ವಾಚಿಪುದೈ || 371 ||
ಇಂತೆನುತಲಿ ವಿಧಿ ಕೇಳಲು ಬಳಿಕಾ |
ಚಿಂತೆಯನು ವಿಸ್ತರಿಸಿದನೈ || 372 ||

**ಕೇದಾರಗೌಳ - ಅಷ್ಟ**

ಹರ ಹರ ಏನು ವಿಚಿತ್ರವೈ ಶಿವ ಮುಖ್ಯ |
ಸುರರೆಲ್ಲ ಕೂಡಿಕೊಂಡು ||
ಧರೆಗೇಕಾಗಮಿಸಿದಿರಿಲ್ಲಿ ನಾ ನೆಲೆಸಿಪ್ಪ |
ಪರಿಯ ವಿಸ್ತರಿಪೆ ಕೇಳಿ || 373 ||
ಶರಧಿಯೊಳ್ ಜನಿಸಿದ ವರ ಜಲಂಧರನೆಂಬ |
ತರಳ ತಾನತಿ ಚೆಲುವ ||
ವರುಣ ಪಾಲಿಪನೆಂದು ಸುರಮುನಿ ಪೇಳಲು |
ಅರಸಿ ಲಕ್ಷ್ಮಿಯು ಲಾಲಿಸಿ || 374 ||
ಮಂಜುಳಾಕರ ತನ್ನ ಪಿತನಲ್ಲಿ ಸುತನೋರ್ವ |
ಸಂಜನಿಸುತ ಭೂಲೋಕದಿ ||
ರಂಜಿಸಿ ಮೆರೆದನಾತನ ಕಾಣಬೇಕೆಂದು |
ಕಂಜಾಕ್ಷಿ ಚಾಲ್ವರಿದು || 375 ||
ಛಲವ ತೊಟ್ಟುದರಿಂದಲವನಲ್ಲಿ ಬಂದಾವು |
ಖಳನಿಚ್ಛೆಯಂತಿರಲು ||
ಬಲವೈರಿಯೊಳು ಕಾದಿಯಾತನು ಮಡಿಯಲಾ |
ತಲೆಗೊಂಡಗ್ನಿಯೊಳಾತನ || 376 ||
ರಮಣಿ ಬಿದ್ದಳಿಯೆ ಬಿಟ್ಟಿರೆನಾಕೆಯನು ತಾನೆಂ |
ದಿರದೆ ಲಕ್ಷ್ಮಿಯು ಬಿದ್ದಳು ||
ಕಮಲಗಂಧಿಯ ಮಾತನಾಡಿಸಿ ನೋಡೆನೆ |
ರಮೆಯೊಳಿಂತೆಂದ ವಿಧಿ || 377 ||

**ಮಧುಮಾಧವಿ - ಆದಿ**

ಲಾಲಿಸಿ ಕೇಳವ್ವ ತಾಯೆ | ಲಕ್ಷ್ಮೀದೇವಿ | ನಿನ್ನ |
ಬಾಲನ ಬಿನ್ನಪವ ತಾಯೆ | ಲಕ್ಷ್ಮೀದೇವಿ ||
ಶೀಲಗುಣಸಾಗರೆ ನೀ | ಲಕ್ಷ್ಮೀದೇವಿ | ಇಂಥಾ |
ಹಾಳು ಛಲವೇತಕವ್ವ | ಲಕ್ಷ್ಮೀದೇವಿ || 378 ||
ತರವೆ ನೀನಿಲ್ಲಿರುವುದಿನ್ನು | ಲಕ್ಷ್ಮೀದೇವಿ | ಬೇಗ |
ತೆರಳು ನಿನ್ನ ಠಾವಿಗಾಗಿ | ಲಕ್ಷ್ಮೀದೇವಿ ||
ಸುರರೆಲ್ಲ ಕಂಗೆಡುವರಲ್ಲ | ಲಕ್ಷ್ಮೀದೇವಿ | ಧೈರ್ಯ |
ವರುಹಿ ನೀನು ರಕ್ಷಿಸವ್ವ | ಲಕ್ಷ್ಮೀದೇವಿ || 379 ||

**ಭಾಮಿನಿ**

ಈ ತೆರದಿ ಸಂಸ್ತುತಿಸಿ ಮೂಜಗ |
ದಾತೆಯಡಿಗೆರಗುತ್ತ ನಾನಾ |
ರೀತಿಯಿಂ ಬೇಡುತಿರೆ ಕೇಳುತಲಾಗ ಕಮಲಾಕ್ಷಿ ||
ಬಾ ತರಳ ನೀನೇಳೆನುತಲತಿ |
ಪ್ರೀತಿಯಲಿ ತಡವರಿಸಿ ಶರನಿಧಿ |
ಜಾತೆಯುಸಿರಿದಳಾಗ ಸರಸೋಕ್ತಿಯಲಿ ವಿಧಿಯೊಡನೆ || 380 ||

**ಕೇದಾರಗೌಳ - ಅಷ್ಟ**

ಶಾರದೆವರನೆ ನೀನೆಂದುದಹುದು ಸಿರಿ |
ನಾರಾಯಣಗೆ ಜಗದಿ ||
ಸೇರಿದ ಮಹಿಮೆಯಿಂದಡಗಿತಾಶ್ರಿತರ ಸಂ |
ಹಾರಿಯೆಂಬರಿವಾದುದು || 381 ||
ಆದರಿಂದಾನನ ತೋರಿಸಲು ನಾಚಿಕೊಂಡೀಗ |
ಪದುಮಗಂಧಿನಿಯ ಕೂಡಿ ||
ಮುದದೊಳಾನಿರುವೆ ನೀವೆಲ್ಲ ನಿಮ್ಮಯ ನಿಜ |
ಸದನಕೆ ತೆರಳುವುದು || 382 ||
ಇನಿತೆನ್ನ ಮನದ ನಿರ್ಧಾರವಲ್ಲದೆ ಬೇರೆ |
ಳ್ಳಿನಿತಿಲ್ಲ ಬದಲೆಣಿಕೆ ||
ಮನುಮಥನಾಣೆ ನಿಶ್ಚಯವೆಂದುಸಿರೆ ಸುರ |
ಮುನಿಪ ನಾರದ ಪೇಳ್ದನು || 383 ||

**ಮಾರವಿ - ಅಷ್ಟ**

ಹರಿ ಹರ ಬ್ರಹ್ಮಾದಿ ಮುಖ್ಯ | ಸುರರೆಲ್ಲರು ಕೇಳಿ ||
ಒರೆವೆನೊಂದುತ್ತರವ ಮನಕೆ |
ಸರಿ ಬಂತಾದರೆ ಪೇಳಿ || 384 ||
ಲಲನೆ ವೃಂದೆಯೆನುವ | ಚೆಲುವ ಕಟ್ಟೆ ರಚಿಸಿ ||
ಲಲಿತವಾದ ತುಳಸಿಯನ್ನು |
ರಮೆಯೆಂದದರೊಳಿರಿಸಿ || 385 ||
ನಳಿನಗರ್ಭಾದ್ಯಮರರನ್ನು | ನೆಲೆಯಾಗಿರಲು ನಿಲಿಸಿ ||
ಬಳಲಬೇಡಿಂತೆಸಗಿ ಸಿರಿಯ | ಛಲವ ಬಿಡದುದ್ಧರಿಸಿ || 386 ||

**ವಾರ್ಧಕ**

ಸಾಧಿಸಿದರಮರಮುನಿವಚನದಿಂದಲೆ ಕಟ್ಟೆ |
ಮೇದಿನಿಯ ಮೇಲೆ ನೂತನವೆನಿಸಿ ಸೊಬಗಿನಲಿ |
ಮಾಧವನ ರಾಣಿಯೆನುತತಿ ಹರುಷದಿಂ ತುಳಸಿಯನು ತಂದಿರಿಸುತದರಲಿ ||
ಆದಿಮಧ್ಯಂತದಲಿ ತ್ರೈಮೂರ್ತಿಗಳು ವಾಸ |
ವಾದರಮರರ್ ಶಾಖೆಗಾವಾಹಿಸಲ್ಕೆ ಮಿ |
ಕ್ಕಾದ ದೇವಿಯರೆಲೆಯ ಮೇಲೆ ಸ್ಥಿರವಾದರಾ ವಾಣಿ ಧುರ್ಜಟಿಯರುಗಳು || 387 ||
ಎರಡು ತಟ್ಟೆಗೆ ಧಾತ್ರಿತಿಂಥ್ರಿಣಿಯ ರಚಿಸಲಾ |
ಗರುಡಗಂಧರ್ವಾದಿ ಮೂಜಗದ ಜೀವಿಗಳು |
ನೆರೆದುದಲ್ಲಿಗೆ ಬಂದು ನಿಮಿಷಾರ್ಧ ಮಾತ್ರದೊಳ್ ನರಹರಿಯ ಸ್ಮರಿಸುತ್ತಲಿ ||
ಸುರ ನರೋರಗರೊಳೀಪರಿಯವರ ಕಾಣೆ ನಾ |
ವರ ಸಮಾಧಿಯೆ ಪಾಲುಗಡಲಾಗಿ ರಂಜಿಸಿತು |
ಧರೆಯೊಳಾ ವೃಂದೆಯಳ ಪುಣ್ಯಕೇನೆಣೆಯುಂಟೆ ಹರಿಯೊಲಿದ ಪರಿಯಿದೀಗ || 388 ||

**ಭಾಮಿನಿ**

ಪರಮಪಾವನೆಯೆಂದು ಪೊಗಳುತ |
ಸುರರು ವೃಂದಾವನವದೆನುತಲೆ |
ಹರುಷದಿಂ ಪೆಸರಿಟ್ಟು ಮೆರೆದರು ತರುಣ ತುಲಸಿಯಲಿ ||
ಹರಿ ಹರಾದಿಗಳಿರಲು ಕಾಣುತ |
ನೆರೆದ ಮುನಿಪರಿವಾರ ಷೋಡಶ |
ತರದ ಪೂಜೆಯ ಮಾಡಿ ನುತಿಸಿದರೆಲ್ಲರೊಂದಾಗಿ || 389 ||

**ಕಾಂಬೋಧಿ - ಆದಿ**

ಜಯ ಜಯ ಜಯವೆನ್ನಿ | ಸರ್ವರು |
ಭವಭಯಹರವೆನ್ನಿ || ಪ ||
ಶರಣ ಸಂರಕ್ಷನಿಗೆ | ಪೂರ್ವಾ |
ಮರರಾಜೇಕ್ಷನಿಗೆ |
ತರುಣಾರ್ಕತೇಜನಿಗೆ | ಲಕ್ಷ್ಮೀಗೆ |
ನರಮೃಗರೂಪನಿಗೆ || 390 ||
ಪುರತ್ರಯನಾಶನಿಗೆ | ಸರ್ಪಾ |
ಭರಣ ತ್ರಿಯಕ್ಷನಿಗೆ ||
ಕರುಣಾಸಮುದ್ರನಿಗೆ | ಸಾಂಬಗೆ |
ಕರವೀರಯ್ಯನಿಗೆ || 391 ||
ಈ ಧರೆ ನಿರ್ಮಿತಗೆ | ಮುನಿಜನ |
ಸಾಧುಪ್ರಸಾದನಿಗೆ ||
ವೇದೋದ್ಧಾರನಿಗೆ | ವಾಣಿಗೆ |
ಕ್ರೋಧವಿವರ್ಜಿತಗೆ || 392 ||
ನಾಗವರೂಢನಿಗೆ | ಸದ್ಗುಣ |
ಸಾಗರಶೌರ್ಯನಿಗೆ |
ಭೋಗದುರಂಧರಗೆ | ಶಚಿಗೆ |
ಯೋಗವಿಚಾರನಿಗೆ || 393 ||
ಮರುತಾದ್ಯಮರರಿಗೆ | ನಿತ್ಯಾ |
ನಂದಸ್ವರೂಪನಿಗೆ |
ಎರಳೆಗಂಗಳೆಯರಿಗೆ | ಪಾವನ |
ತರ ಸಚ್ಚರಿತರಿಗೆ || 394 ||

**ಭಾಮಿನಿ**
ಹರಿಪರಾಯಣರಾಲಿಸಿಂತೀ |
ಪರಿಯ ಹರಿ ಹರ ಬ್ರಹ್ಮಮುಖ್ಯಾ |
ಮರರು ವೃಂದೆಯನುದ್ಧರಿಸಿ ತಾವೆಲ್ಲ ತುಳಸಿಯಲಿ ||
ಇರುವೆವನುದಿನ ಬಿಡದೆ ತುಳಸಿಯ |
ವರಪ್ರದಕ್ಷಿಣೆ ಗೆಯ್ವ ಜನರಿಗೆ |
ಹರಿಸುತನ ಭಯವಿಲ್ಲ ವರ ಪ್ರಹ್ಲಾದನಂತಿಹುದು || 395 ||

**ಸಾಂಗತ್ಯ - ರೂಪಕ**
ಇಂತೆಂದು ವರವಿತ್ತು ತ್ರೈಮೂರ್ತಿಗಳು ತಾವು |
ಸಂತಸದಿಂದೆಲ್ಲ ಸುರರ ||
ನಿಂತಿರಬೇಡಿ ನೀವೆನುತುಪಚರಿಸುತ್ತ |
ಕಂತುಪಿತನು ಪೇಳ್ದ ಕಡೆಗೆ || 396 ||
ವರುಷಕೊಮ್ಮೆಗೆ ನೀವು ಬರಬೇಕು ತುಳಸಿಯ |
ವರ ವೃಂದಾವನದೊಳು ನಾವು ||
ಇರುವೆವು ಕಾರ್ತೀಕ ಶುದ್ಧದ್ವಾದಶಿಯಲ್ಲಿ |
ಮರೆಯದಿರೀಮಾತನೆಲ್ಲ || 397 ||
ತೆರಳಿ ನಿಮ್ಮಯ ಠಾವಿಗೆನುತಲೆ ನೇಮವ |
ಹರಿ ಹರಗಿತ್ತು ಬೀಳ್ಕೊಂಡ ||
ಸರಸಿಜಾಸನ ಸತ್ಯಲೋಕ ಸೇರಲಿಕಿತ್ತ |
ಹರ ಕೈಲಾಸಕೆ ನಡೆತಂದ || 398 ||
ಮುನಿಗಳ ಕಳುಹಿಸಿ ವನಜಾಕ್ಷ ವೈಕುಂಠ |
ಘನಮಂದಿರಕೆ ಸತಿಸಹಿತ ||
ನೆನೆವರ ಮನದಿಷ್ಟ ಕರುಣಿಸಬೇಕೆಂಬ |
ಮನದಿಂದ ಸೇರಿರ್ದರೆನುತ || 399 ||
ಸೂತ ಮುನಿಯು ಶೌನಕಾದ್ಯರ್ಗೆ ತಾ ಪೇಳ್ದ |
ನೂತನ ಕಥೆಯಿದೆಂದೆನುತ ||
ನಾ ತಿಳಿದಂತೆ ವರ್ಣಿಸಿದೆನು ಕನ್ನಡ |
ಮಾತಿನ ಯಕ್ಷಗಾನದಲಿ || 400 ||
ತರಳನೂಣೆಯಿದೆಂದು ಜರೆಯದೆ ಪರಿಕಿಸಿ |
ಧರೆಯೊಳು ಕೃತ್ತಿಕಪುರದಿ ||
ಸ್ಥಿರವಾಗಿ ಮೆರೆವ ಶ್ರೀಸೋಮನಾಥನ ಪೂರ್ಣ |
ಕರುಣೆಯಿಂದೊರೆದೆನೀ ಕೃತಿಯ || 401 ||

**ಮಂಗಲ**
ಮಂಗಲಂ ಲಕ್ಷ್ಮೀನಾರಾಯಣನಿಗೆ | ಜಯ |
ಮಂಗಲಂ ನರಮೃಗರೂಪನಿಗೆ || ಪ ||
ದುರುಳರ ಭಂಗಿಗೆ ಶರಣರ ಸಂಗಿಗೆ |
ತರಳ ಪ್ರಹ್ಲಾದ ಸುಪ್ರಸನ್ನನಿಗೆ |
ತರುಣಾರ್ಕತೇಜಗೆ ತುರುಗಳ ಕಾಯ್ದಗೆ |
ಭರದಿ ಕಂಬವ ಭೇದಿಸಿ ಬಂದವಗೆ || 402 ||
ಅಪ್ಪ ಕಜ್ಜಾಯ ಸಕ್ಕರೆ ತುಪ್ಪ ಮೆಲುವಗೆ |
ತಪ್ಪದೆ ಶರಣರಿಷ್ಟವನೀವಗೆ ||
ಸರ್ಪಭೂಷಣನಾಗಿ ಕೃತ್ತಿಕ ನಗರದೊ |
ಳೊಪ್ಪುವ ಶ್ರೀಗಣನಾಥನಿಗೆ || 403 ||

ಗಾಳಿಯಣುಗನಿಗೆ ನಗಕರಶಯನಗೆ |
ಖೂಳ ದುಷ್ಟರ ಎದೆ ಶೂಲನಿಗೆ ||
ಶೀಲ ಸಜ್ಜನರ ಕೃಪಾಳುಗೆ ಕುರುಕುಲ |
ಕಾಲನಾಗಿಹ ವೇದಮೂರುತಿಗೆ || 404 ||
ವ್ಯೋಮಪಾಲಾದಿ ಪೀಯೂಷಸೇವಿತರಿಗೆ |
ಕೋಮಲಕಾಯ ನಿಷ್ಕಪಟರಿಗೆ ||
ಕಾಮಿತಾರ್ಥವನೀವ ನರಹರಿಗೆ |
ವಾಮದೇವಾದಿ ಮಹಾ ಋಷಿಗಳಿಗೆ || 405 ||
ಪಂಚಶರಾರಿಗೆ ಪಾವನಚರಿತಗೆ |
ಸಂಚಿತವೀವ ಸದಾಶಿವಗೆ ||
ಪಂಚಾಸ್ಯನಾಗಿ ಕುತ್ಯಾರದಿ ಮೆರೆವ ಪ್ರ |
ಪಂಚರಹಿತ ಸೋಮನಾಥನಿಗೆ ||
ಮಂಗಲಂ ಜಯ ಮಂಗಲಂ || ಶುಭ ಮಂಗಲಂ || ನಿತ್ಯ ಮಂಗಲಂ || 406 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪಾವಂಜೆ ಗುರುರಾವ್ & ಸನ್ಸ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ

**ಪ್ರಸಂಗ ಪ್ರತಿ ಆಧಾರ:** ಪಾವಂಜೆ ಗುರುರಾವ್ & ಸನ್ಸ್, ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಪ್ರಕಟಿತ ಕೃತಿ

**ಪ್ರಸಂಗ ಪ್ರತಿ ಕೊಟ್ಟವರು:** ಶ್ರೀ ಮನೋಹರ್ ಕುಂದರ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಶ್ರೀ ಮನೋಹರ್ ಕುಂದರ್

**ಅಂತರಜಾಲ ಪ್ರತಿ ಬರವಣಿಗೆ:** ವಸುಮತಿ ಜಿ., ಕಜೆ ಸುಬ್ರಹ್ಮಣ್ಯ ಭಟ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ,  ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ